ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 8 ಸಂಚಿಕೆ 45 ನವಂಬರ್ 9, 1986 ಬೆಲೆ 80 ಪೈಸೆ

ಒಳಗೇನಿದೆ?....

ಛಿದ್ರಕಾರಿ ಶಕ್ತಿಗಳಿಂದ ದೇಶಕ್ಕೆ ಅಪಾಯ

ಕಾಂಗ್ರೆಸ್ಸಿನ ಸಂಘಟನಾ ಶಕ್ತಿಯಲ್ಲಿ ಕುಸಿತ

ಕಾಂಗ್ರೆಸ್ ಪಕ್ಷದ ಮುಖಂಡತ್ವ ಸಾಮ್ರಾಜ್ಯಶಾಹಿ ವಿರೋಧಿ ಹಾಗೂ ರಾಷ್ಟ್ರೀಯ ಐಕ್ಯತೆಯ ಪರಂಪರೆಯ ನಿಲುಮೆಯಿಂದ ದೂರ ಸರಿದಿದೆ. ಆ ಕಾರಣದಿಂದಾಗಿಯೇ ದೇಶ ಎದುರಿಸುತ್ತಿರುವ ಗಂಭೀರ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಎದುರಿಸಲು ಸಾಧ್ಯವಾಗುತ್ತಿಲ್ಲ. ಪಕ್ಷದ ಸಂಘಟನಾ ಚುನಾವಣೆಯನ್ನು ಅನಿರ್ದಿಷ್ಟವಾಗಿ ಮುಂದೂಡಲಾಗು ಮತೀಯರ ಗುಂಪು ತೀವ್ರ ಬೆಳೆಯುತ್ತಿದೆ. ಪ್ರತಿಯೊಂದು ರಾಜ್ಯದಲ್ಲಿಯೂ ತ್ತಿದ್ದು ಅದನ್ನೆದುರಿಸುವ ಶಕ್ತಿ ಕೇಂದ ಹಾಗೆಯೇ ಕೇಂದ್ರದಲ್ಲಿಯೂ ಭಿನ್ನ (8ನೇ ಪುಟ ನೋಡಿ)

○ ಕಾಂಗ್ರೆಸ್ ಪಕ್ಷದ ಮುಖಂಡತ್ವ ಸಾಮ್ರಾಜ್ಯಶಾಹಿ ವಿರೋಧಿ ಹಾಗೂ ರಾಷ್ಟ್ರೀಯ ಐಕ್ಯತೆಯ ನಿಲುಮೆಯಿಂದ ದೂರಸರಿದಿದೆ.

○ ಬಂಡವಾಳಶಾಹಿ ವಿರೋಧ ಪಕ್ಷಗಳು ತಾವು ಆಳುತ್ತಿರುವ ಕರ್ನಾಟಕ-ಆಂಧ್ರಗಳಲ್ಲಿ ಜಾತಿ, ಧರ್ಮಗಳ ಆಧಾರದಲ್ಲಿ ಜನರನ್ನು ವಿಭಜಿಸುವ ತಂತ್ರ ಹೂಡಿದ್ದಾರೆ. ಆ ಕಾರಣಕ್ಕಾಗಿಯೇ ವಿಸಲಾತಿ ಪ್ರಶ್ನೆಯನ್ನೆತ್ತಿದ್ದಾರೆ.

—ಕೇಂದ್ರಸಮಿತಿ

ಪ್ರತ್ಯೇಕತಾವಾದಿ, ಛಿದ್ರಕಾರಿಗಳಿಗೆ ಬೆಂಬಲ ನೀಡುವ

ಪ್ರಧಾನಿ ನೀತಿಗೆ ಪ್ರತಿಪಕ್ಷಗಳಿಂದ ಪ್ರತಿರೋಧ

ಡಾರ್ಜಿಲಿಂಗ್‌ನಲ್ಲಿ ನಡೆಯುತ್ತಿರುವ ಉಗ್ರಗಾಮಿಗಳ ಗೂರ್ಖಾ ಚಳುವಳಿ ರಾಷ್ಟ್ರ ವಿರೋಧಿಯಲ್ಲೆಂದು ಪದೇ ಪದೇ ಬಹಿರಂಗ ಹೇಳಿಕೆ ನೀಡುತ್ತ ಕಾಂಗ್ರೆಸ್ ಸಂಸದೀಯ ಸದಸ್ಯರ ಸಭೆಯಲ್ಲಿ ಅದನ್ನೇ ಪುನರುಚ್ಚರಿಸಿ ಗೂರ್ಖಾಲ್ಯಾಂಡ್ ಚಳುವಳಿಯಲ್ಲಿ ರಾಷ್ಟ್ರ ವಿರೋಧಿಯಾದುದ್ದೇನೂ ಇಲ್ಲೆಂದು, ಆ ರೀತಿ ಏನಾದರೂ ಇದ್ದರೆ ಅದಕ್ಕೆ ಸೂಕ್ತವಾದ ಕ್ರಮ ತೆಗೆದುಕೊಳ್ಳುವುದು ರಾಜ್ಯ ಸರಕಾರದ ಹೊಣೆಗಾರಿಕೆ ಎಂದು ಹೇಳಿರುವುದು ಪ್ರಧಾನಿಯವರ ವಿವೇಚನೆಯಿಲ್ಲದ ಪಕ್ಷಪಾತ ತನದ ಉದ್ರೇಕಕಾರಿ ಹೇಳಿಕೆಯಾಗಿದೆ. ಅದರಿಂದ ತೀವ್ರ ಪರಿಣಾಮ ಉಂಟಾಗುತ್ತದೆ, ಕಾರಣ ಪ್ರಧಾನಿಯವರು ತಮ್ಮ ಹೇಳಿಕೆಯನ್ನು ವಾಪಸು ಪಡೆಯಬೇಕೆಂದು ಲೋಕಸಭೆಯಲ್ಲಿ ಸಿ. ಪಿ. ಐ. (ಎಂ) ಪಕ್ಷದ ಮುಖಂಡರಾದ ಬಸುದೇವ ಆಚಾರ್ಯ ಸೈಫುದ್ದೀನ್ ಚೌಧರಿ, ಸೋಮನಾಥ ಚಟರ್ಜಿ ಅವರು ಮಂಡಿಸಿದ ನಿಲುವಳಿ ಸೂಚನೆಗೆ ಸಿ.ಪಿ.ಐ., ಜನತಾ, ಲೋಕದಳ, ಡಿ.ಎಂ.ಕೆ. ಮೊದಲಾದ ಹೆಚ್ಚಿನ ವಿರೋಧ ಪಕ್ಷಗಳು ಬೆಂಬಲ ನೀಡಿದರೂ, ಸ್ಪೀಕರ್ ಅದಕ್ಕೆ ಅನುಮತಿ ನೀಡದ್ದರಿಂದ ಪ್ರತಿಪಕ್ಷದ ಸದಸ್ಯರೆಲ್ಲ ಅದನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡಿದರು. ನಿಲುವಳಿ ಸೂಚನೆಗೆ 50 ಕ್ಕಿಂತ ಹೆಚ್ಚು ಸದಸ್ಯರು ಬೆಂಬಲ ನೀಡಿದ್ದೇ ಆದರೆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂಬ ನಿಯಮ ವಿದ್ದರೂ ಕೂಡ ಸ್ಪೀಕರ್ ಅದನ್ನು ನಿರಾಕರಿಸಿದ್ದಕ್ಕೆ ವಾಗ್ಯುದ್ಧ, ಪ್ರತಿಭಟನೆ ನಡೆಯಿತು.

ಗೂರ್ಖಾಲ್ಯಾಂಡ್ ಚಳುವಳಿ ರಾಷ್ಟ್ರ ವಿರೋಧಿ ಎಂದೂ, ಭಾರತದ ಜನತೆ, ಅದರಲ್ಲೂ ಪಶ್ಚಿಮ ಬಂಗಾಲದ ಜನತೆ ಅದರ ವಿರುದ್ಧ ಸಂಘಟಿತ ಹೋರಾಟ ನಡೆಸುವರೆಂದೂ ವಿರೋಧ ಪಕ್ಷಗಳನಾಯಕರೆಲ್ಲಾ ಪತ್ರಿಕಾ ಹೇಳಿಕೆ ಮೂಲಕ ಆಶಯ ವ್ಯಕ್ತ ಮಾಡಿದ್ದಾರೆ.

ಅಕ್ಟೋಬರ್ ಎರಡರಂದು ರಾಜಘಾಟಿನಲ್ಲಿ ರಾಷ್ಟ್ರಪತಿ ಜೈಲ್‌ಸಿಂಗ್ ಮತ್ತು ಪ್ರಧಾನಿ ರಾಜೀವಗಾಂಧಿಯವರ ಕೊಲೆಗೆ ನಡೆದ ಪ್ರಯತ್ನದಿಂದಾಗಿ ಸರಕಾರದ ಭದ್ರತೆಯ ವ್ಯವಸ್ಥೆಗಳ ವೈಫಲ್ಯದ ಕುರಿತು ಜನತಾ ಪಕ್ಷದ ಮಧುದಂಡವತೆಯವರು ಮಂಡಿಸಿದ ನಿಲುವಳಿ ಸೂಚನೆಗೆ ಎಲ್ಲಾ ವಿರೋಧ ಪಕ್ಷಗಳ ಬೆಂಬಲವಿದ್ದರೂ ಅದನ್ನು ಚರ್ಚಿಸಲು ಸ್ಪೀಕರ್ ಅವಕಾಶ ಮಾಡಿಕೊಡದಿದ್ದರಿಂದ ಗೊಂದಲದಲ್ಲೇ ವಿರೋಧ ಪಕ್ಷಗಳ ಸಭಾತ್ಯಾಗ ನಡೆಯಿತು.

ಲೋಕಶಾಹಿ ನೀತಿನಿಯಮಗಳನ್ನೆಲ್ಲ ಗಾಳಿಗೆ ತೂರಿ ರಾಜೀವ ಗಾಂಧಿ ಸರಕಾರ ಸರ್ವಾಧಿಕಾರಿ ಪ್ರವೃತ್ತಿಯನ್ನು ಪ್ರದರ್ಶಿಸುತ್ತಿದೆ. ಛಿದ್ರಕಾರಿ ಪ್ರತ್ಯೇಕವಾದಿ ಶಕ್ತಿಗಳಿಗೆ ಕುಮ್ಮಕ್ಕು ಕೊಡುತ್ತಿದೆ. ದೇಶದ ಭದ್ರತೆಗೆ, ಏಕತೆಗೆ ಅದು ಅಪಾಯಕಾರಿ. ರಾಜೀವಗಾಂಧಿಯವರ, ಅವರ ಕೇಂದ್ರ ಸರಕಾರದ ನೀತಿ ದೇಶಕ್ಕೇನೆ ಅಪಾಯಕಾರಿ. ಅದನ್ನು ವಿರೋಧಿಸಲೇಬೇಕು.

ಕಾ. ಶಾಂತಿಮಯಿ ಘೋಷ್‌ರವರ ನಿಧನ

ಸಿ.ಪಿ.ಐ (ಎಂ) ಪಕ್ಷದ ಹಿರಿಯ ನಾಯಕರೂ ರಾಜ್ಯಸಭಾ ಸದಸ್ಯರೂ ಆದ ಶಾಂತಿಮಯಿಘೋಷ್ ಅವರು ತಮ್ಮ 72ನೆಯ ವಯಸ್ಸಿನಲ್ಲಿ ನಿಧನರಾದರು. ಅವರು ಅಖಿಲ ಭಾರತ ಕಿಸಾನ್‌ಸಭಾದ ಉಪಾಧ್ಯಕ್ಷರೂ, ಸಿ.ಪಿ.ಐ.(ಎಂ) ಪಕ್ಷದ ಕೇಂದ್ರ ಸಮಿತಿಯ ಸದಸ್ಯರೂ ಆಗಿದ್ದರು. 31-10-86ರಂದು ರಾತ್ರಿ ಕಲ್ಕತ್ತಾದ ತಮ್ಮ ಸ್ವಂತ ನಿವಾಸದಲ್ಲಿ ಹೃದಯಾಘಾತಕ್ಕೆ ತುತ್ತಾಗಿ ಕೊನೆಯುಸಿರೆಳೆದರು

ಕಾ. ಶಾಂತಿಮಯಿಘೋಷ್‌ರವರ ಅಕಾಲಿಕ ನಿಧನಕ್ಕೆ ಅಂದು ದಿಲ್ಲಿಯಲ್ಲಿ ಸಭೆ ಸೇರಿದ್ದ ಸಿ.ಪಿ.ಐ. (ಎಂ) ಕೇಂದ್ರ ಸಮಿತಿ ತನ್ನ ಅಪಾರ ಸಂತಾಪ ವ್ಯಕ್ತಪಡಿಸಿ, ಹಿರಿಯ ಸ್ವಾತಂತ್ರ್ಯ ಸೇನಾನಿ, ಭಾರತ ಕಿಸಾನ ಚಳುವಳಿಯ ನೇತಾ ಆಗಿದ್ದ ಅವರ ನಿಧನದಿಂದ ಪಕ್ಷಕ್ಕೆ, ಜನತೆಗೆ, ದೇಶದ ಪ್ರಜಾಪ್ರಭುತ್ವ ಚಳುವಳಿಗೆ ತುಂಬಲಾರದ ನಷ್ಟವಾಗಿದೆಂದು ಹೇಳಿದೆ

ಅವರು ಈಗ ಬಾಂಗ್ಲಾ ದೇಶದಲ್ಲಿರುವ ಜೇಸುರಿ ಎಂಬ ಗ್ರಾಮದಲ್ಲಿ ಜನಿಸಿದ್ದರು. 1930ರಲ್ಲಿ ವಿದ್ಯಾರ್ಥಿಯಾಗಿರುವಾಗಲೇ ಕಿಸಾನಸಭೆಯ ನೇತೃತ್ವದಲ್ಲಿ ನಡೆಯುತ್ತಿದ್ದ ಚಳುವಳಿಯಿಂದ ಆಕರ್ಷಿತರಾಗಿ ಅದರಲ್ಲಿ ಸೇರಿದರು. 1937ರಲ್ಲಿ ಕಮ್ಯುನಿಸ್ಟ್ ಪಕ್ಷದ ಸದಸ್ಯರಾದರು. ಬ್ರಿಟಿಷರ ಆಡಳಿತೆಯಲ್ಲಿ ಹಲವಾರು ಸಲ ಜೈಲು ಕಂಡಿದ್ದರು. 4 ವರ್ಷ ಪಾಕಿಸ್ತಾನದ ಜೈಲಿನಲ್ಲಿದ್ದರು.

ಅವರು ಅಖಿಲ ಭಾರತ ಕಿಸಾನಸಭಾದ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಪಾಟ್ನಾ ಸಮ್ಮೇಳನದಲ್ಲಿ ಅದರ ಉಪಾಧ್ಯಕ್ಷರಾಗಿ ಆಯ್ಕೆಯಾದರು. ಕಳೆದ 8 ವರ್ಷಗಳಿಂದ ಪಶ್ಚಿಮ ಬಂಗಾಲ ಸಿ.ಪಿ.ಐ (ಎಂ) ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾಗಿದ್ದರು.

ಪಶ್ಚಿಮ ಬಂಗಾಲದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಬೆಳೆಸುವುದರಲ್ಲಿ ಕಾ. ಶಾಂತಿಮಯಿಘೋಷ್ ಅವರ ಶ್ರಮ ಅಪಾರವಾಗಿತ್ತು. ಕಳೆದ 50 ವರ್ಷಗಳಿಂದಲೂ ಅವರು ಭಾರತದಲ್ಲಿ ಶೋಷಣೆಗೊಳಗಾದ ಜನರನ್ನು ಸಂಘಟಿಸುವುದರಲ್ಲಿ ಪೂರ್ಣಕಾಲದ ಕಾರ್ಯಕರ್ತರಾಗಿ ದುಡಿದರು.

ಅವರು ಕಿಸಾನಸಭಾದ ಕಾರ್ಯದರ್ಶಿಯಾಗಿದ್ದಾಗ ಕಳೆದ ಮೂರು ವರ್ಷಗಳಲ್ಲಿ ಅವರು ರಾಯಚೂರಿನಲ್ಲಿ ರೈತ ಕಾರ್ಯಕರ್ತರಿಗೆ ಶಿಕ್ಷಣ ಶಿಬಿರ ನಡೆಸಿದ್ದರು. ರೈತ ಸಂಘದ ಚಟುವಟಿಕೆಗಳಲ್ಲಿ ಪಾಲ್ಗೊಂಡು ಕರ್ನಾಟಕದಲ್ಲಿ ಬಲಿಷ್ಠವಾದ ರೈತಸಂಘ ಬೆಳೆದು ಬರಲಿಕ್ಕೆ ಮಾರ್ಗದರ್ಶನ ನೀಡಿದ್ದರು. ಸಿ.ಪಿ.ಐ. (ಎಂ) ಕರ್ನಾಟಕ ರಾಜ್ಯ ಸಮಿತಿ ಹಿರಿಯ ಮುಖಂಡ ಶಾಂತಿಮಯಿಘೋಷ್ ಅವರ ನಿಧನಕ್ಕೆ ತೀವ್ರ ಸಂತಾಪ ಸೂಚಿಸುತ್ತದೆ. ಅವರ ಕುಟುಂಬದವರ ಶೋಕದಲ್ಲಿ ಪಾಲ್ಗೊಳ್ಳುತ್ತದೆ.

ಮುಳಬಾಗಲು ಕ್ಷೇತ್ರದ ಅಭಿವೃದ್ಧಿ

ವಿಧಾನಸಭೆಯಲ್ಲಿ ಸಿ.ಪಿ.ಐ. (ಎಂ) ಶಾಸಕರಾದ ಕಾಂ. ಆರ್. ವೆಂಕಟರಾಮಯ್ಯನವರು ಮುಳಬಾಗಲು ಕ್ಷೇತ್ರದಲ್ಲಿ ಸಿ.ಪಿ.ಐ. (ಎಂ) ಆಯ್ಕೆ ನಂತರದ ಪ್ರಗತಿಯನ್ನು ವಿವರಿಸುತ್ತಾರೆ....

1985ರ ವಿಧಾನಸಭಾ ಚುನಾವಣೆಯ ನಂತರ ಮುಳಬಾಗಲು ಕ್ಷೇತ್ರದ ಅಭಿವೃದ್ಧಿಗಾಗಿ ವಿಧಾನ ಸಭೆಯ ಒಳಗೂ ಮತ್ತು ಹೊರಗೂ ಸತತ ಹೋರಾಟ ನಡೆಸುತ್ತಾ ಬರಲಾಗಿದೆ.

ಮುಳಬಾಗಲು ತಾಲೂಕಿನಲ್ಲಿ ಚುನಾವಣೆಗೆ ಮೊದಲು ಕೇವಲ 4 ಹಾಲು ಉತ್ಪಾದಕರ ಸಂಘಗಳಿದ್ದು ಅವುಗಳ ಸಂಖ್ಯೆ ಈಗ 48ಕ್ಕೇರಿದೆ. ಇನ್ನೂ 10 ಸಂಘಗಳು ಪ್ರಾರಂಭವಾಗುವ ಹಂತದಲ್ಲಿವೆ.

ಮುಳಬಾಗಲು ತಾಲ್ಲೂಕು 1984ರಿಂದ ತೀವ್ರತರ ಬರ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಬರ ಪರಿಹಾರ ಮತ್ತಿತರ ಕಾಮಗಾರಿಗಳಿಗಾಗಿ ಕಳೆದ ಒಂದು ವರ್ಷದಿಂದ ನಡೆಸಿದ ಸತತ ಹೋರಾಟದ ಫಲವಾಗಿ ಸರ್ಕಾರದಿಂದ 44 ಲಕ್ಷ ರೂಪಾಯಿಗಳನ್ನು ಪಡೆದು 250 ಹಳ್ಳಿಗಳಲ್ಲಿ ಪರಿಹಾರ ಕಾಮಗಾರಿಗಳನ್ನು ನಡೆಸಲಾಗಿದೆ.

ಪಾಠಶಾಲೆಗಳಿಲ್ಲದೆ, ಶಾಲಾ ಕಟ್ಟಡಗಳಿಲ್ಲದೆ ತಾಲೂಕಿನ ಮಕ್ಕಳು ಪಡುತ್ತಿದ್ದ ಬವಣೆಯನ್ನು ಗಮನಿಸಿ ಸರ್ಕಾರದಿಂದ 15 ಪಾಠಶಾಲೆಗಳನ್ನು, 6 ಸಾಮೂಹಿಕ ಕೇಂದ್ರ ಕಟ್ಟಡಗಳನ್ನು ಕಟ್ಟಿಸಲಾಗಿದೆ. ತಾಲೂಕಿನಲ್ಲಿ 380 ಗ್ರಾಮಗಳು ಮತ್ತು 40 ಮುಜರಾ ಗ್ರಾಮಗಳಿದ್ದು ಕಳೆದ ವರ್ಷ 1 ಕಾಲೇಜು, 1 ಹೈಸ್ಕೂಲು, 8 ಮಿಡ್ಲ್‌ಸ್ಕೂಲ್, 36 ಪ್ರಾಥಮಿಕ ಶಾಲೆಗಳನ್ನು ಸರ್ಕಾರದಿಂದ ಮಂಜೂರು ಮಾಡಿಸಲಾಗಿದೆ. ಈ ವರ್ಷ 15 ಪಾಠಶಾಲೆಗಳು, 12 ಪ್ರಾಥಮಿಕ ಶಾಲೆಗಳು, 3 ಮಿಡ್ಲ್ ಸ್ಕೂಲುಗಳನ್ನು ಸ್ಥಾಪಿಸಲಾಗಿದೆ. ಅಲ್ಲದೆ 16 ಶಾಲಾ ಕಟ್ಟಡಗಳನ್ನು 2 ಹೈಸ್ಕೂಲು ಕಟ್ಟಡಗಳನ್ನು ಒಂದು ಹಾಸ್ಟೆಲ್ ಕಟ್ಟಡವನ್ನು ಕಟ್ಟಿಸಲಾಗುತ್ತಿದೆ.

ತಾಲೂಕಿನಲ್ಲಿ ಹೋದ ವರ್ಷ 171 ಅಂಗನವಾಡಿ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು ಪ್ರತಿಯೊಂದರಲ್ಲೂ ಸರಾಸರಿ 75 ಮಕ್ಕಳಿಗೆ ಭೋಧನೆ ಪೋಷಣೆಗಳು ನಡೆಯುತ್ತಿದ್ದು, ಸರಾಸರಿ 20 ಮಹಿಳೆಯರಿಗೆ ಗರ್ಭಾವಧಿಯಲ್ಲಿ ಮತ್ತು ಹೆರಿಗೆಯ ನಂತರ ಮೂರು ತಿಂಗಳು ಶುಶ್ರೂಷೆ ನಡೆದಿದೆ. ಇನ್ನು 100 ಅಂಗನವಾಡಿಗಳ ಸ್ಥಾಪನೆಗೆ ಪ್ರಯತ್ನ ನಡೆದಿದೆ.

ಅಂಗವಿಕಲರಿಗೆ, ವಿಧವೆಯರಿಗೆ 65 ವರ್ಷಕ್ಕೆ ಮೇಲ್ಪಟ್ಟ ದಿಕ್ಕಿಲ್ಲದ ಬಡವರಿಗೆ, ಕೃಷಿ ಕೂಲಿಗಾರರಿಗೆ 1985ರ ಮಾರ್ಚ್‌ನಿಂದ ಇಲ್ಲಿಯವರೆಗೆ ಒಟ್ಟು 6500 ಜನರಿಗೆ ಮಾಸಾಶನ ಕೊಡಲಾಗುತ್ತಿದೆ. ಈ ಕಾರ್ಯವನ್ನು 25 ದೊಡ್ಡ ಕೇಂದ್ರಗಳಲ್ಲಿ ಶಿಬಿರ ನಡೆಸಿ, ಹಳ್ಳಿಗಳಲ್ಲಿ ಜನಸಂಪರ್ಕ ಸಭೆಗಳನ್ನು ನಡೆಸಿ, ಸ್ಥಳದಲ್ಲಿಯೇ ವಿತರಣೆ ಮಾಡಲಾಗಿದೆ. ಈ ವರ್ಷದ ಅಂತ್ಯದ ವೇಳೆಗೆ ಈ ಕಾರ್ಯಕ್ರಮದಡಿಯಲ್ಲಿ ಕಡುಬಡವ, ಕೃಷಿ ಕಾರ್ಮಿಕರ 10,000 ಕುಟುಂಬಗಳಿಗೆ ಸಿಗುವಂತೆ ಮಾಡುವ ಗುರಿಯನ್ನು ಇಟ್ಟುಕೊಳ್ಳಲಾಗಿದೆ.

ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯ (IRDP) ಅಡಿಯಲ್ಲಿ 700 ಬಡ ಕುಟುಂಬಗಳಿಗೆ ಸಾಲ ಮೇಳಗಳನ್ನು ನಡೆಸಿ ಸಾಲಗಳನ್ನು ಕೊಡಿಸಲಾಗಿದೆ. ಇದರ ಪ್ರಮಾಣವನ್ನು ಇನ್ನೂ ಹೆಚ್ಚಿಸಲು ಪ್ರಯತ್ನಿಸಲಾಗುತ್ತಿದೆ.

ಹಳ್ಳಿಗಾಡುಗಳ ಬಡಜನತೆಗೆ, ಹಿಂದುಳಿದ ವರ್ಗಗಳಿಗೆ ಈವರೆಗೆ 700 ವಸತಿಗಳನ್ನು ಒದಗಿಸಲಾಗಿದ್ದು ಅದನ್ನು ಸತತವಾಗಿ ಹೆಚ್ಚಿಸಲು ಎಲ್ಲಾ ಮಟ್ಟಗಳಲ್ಲೂ ಹೋರಾಟ ನಡೆಸಲಾಗುತ್ತಿದೆ.

ಭ್ರಷ್ಟಾಚಾರದ ವಿರುದ್ಧ ಕೈಗೊಂಡ ಕ್ರಮಗಳಿಂದಾಗಿ ತಾಲೂಕಿನಲ್ಲಿ 14 ಜನ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ. ಇದರಿಂದ ಅಧಿಕಾರಶಾಹಿ ಕೊಂಚಮಟ್ಟಿಗೆ ತಹಬಂದಿಗೆ ಬಂದಿದೆ.

ಮಿಣಿಜೇನಹಳ್ಳಿಯ ಬಳಿ 9 ಲಕ್ಷ ರೂಪಾಯಿ ವೆಚ್ಚದ ಸೇತುವೆ, ಶಿವನಾರಹಳ್ಳಿಯ ಸೇತುವೆ, ಕೌಂಡಿನ್ಯ ನದಿಗೆ ಸೇತುವೆ, ತಿಮ್ಮರಾವುತನಹಳ್ಳಿ ಸೇತುವೆಗಳು ಮಂಜೂರಾಗಿದ್ದು ಇವುಗಳಲ್ಲಿ ಎರಡನ್ನು ಪೂರೈಸಲಾಗಿದ್ದು, 3ನೆಯದು ಇನ್ನೊಂದು ತಿಂಗಳಲ್ಲಿ ಪ್ರಾರಂಭವಾಗಲಿದೆ.

ನೀರಾವರಿಗೆ ಸಂಬಂಧಿಸಿದಂತೆ ಈ ವರ್ಷದಲ್ಲಿ 11 ಲಕ್ಷ ವೆಚ್ಚದ ಓಬಳೇಶ್ವರ ಗುಡ್ಡ ಪೂರ್ಣಗೊಂಡಿದ್ದು 20 ಲಕ್ಷ ವೆಚ್ಚದ ಶೆಟ್ಟಿಕಲ್ಲು ಕೆರೆ ಪೂರ್ಣವಾಗುವ ಹಂತದಲ್ಲಿದೆ.

4 ಲಕ್ಷ ರೂಪಾಯಿ ವೆಚ್ಚದಲ್ಲಿ ಶಂಕರಮ್ಮನಕೆರೆ ಕಟ್ಟಲಾಗುತ್ತಿದೆ. 16 ಲಕ್ಷ ವೆಚ್ಚದ ಗೌಡನಕೆರೆ ಯೋಜನೆ, 2½ ಕೋಟಿಯ ನಾಚಿಕೆರೆ ನೆಗೆವಾರ ಯೋಜನೆಗಳನ್ನು ಆಯವ್ಯಯದಲ್ಲಿ ಸೇರಿಸಲಾಗಿದ್ದು ಈ ವರ್ಷ ಆ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದಾಗಿ ಸರ್ಕಾರ ಭರವಸೆ ನೀಡಿದೆ.

ಹಳ್ಳಿ ಹೆದ್ದಾರಿಯಲ್ಲಿ 3 ಲಕ್ಷ 70 ಸಾವಿರ ರೂ. ವೆಚ್ಚದಲ್ಲಿ ಒಂದು ಯೋಜನೆ ಪೂರ್ತಿಯಾಗಿದೆ. ನಂಗಲಿಕೆರೆ 1 ಲಕ್ಷ 70 ಸಾವಿರ, ನೆಗೆವಾರ ರಸ್ತೆ 1 ಲಕ್ಷ 80 ಸಾವಿರ, ಮುಡಿಗೆರೆ ದಬ್ಬಗೆ ರಸ್ತೆ 2 ಲಕ್ಷ 50 ಸಾವಿರ.

ಒಂದೂವರೆ ಲಕ್ಷ ವೆಚ್ಚದ ಆರ್.ಎಲ್.ಇ.ಜಿ.ಪಿ.ಯ ಯಳಚೀನಹಳ್ಳಿ ರಸ್ತೆ ಕೆಲಸ ಪೂರ್ತಿಯಾಗಿದೆ ನೆಗೆವಾರ ರಸ್ತೆ ಇನ್ನೂ ಪೂರ್ತಿಯಾಗಿಲ್ಲ.

ಪ್ರತಿ ತಿಂಗಳೂ ಕೆ.ಡಿ.ಪಿ. ಸಭೆಯನ್ನು ತಾಲೂಕು ಮಟ್ಟದಲ್ಲಿ ನಡೆಸಲಾಗುತ್ತಿದೆ.

ಎನ್.ಆರ್.ಇ.ಪಿ. ಯಡಿಯಲ್ಲಿ 40 ಗ್ರಾಮಗಳಿಗೆ, ಮಿನಿವಾಟರ್ ಸಪ್ಲೈನಲ್ಲಿ 10 ಗ್ರಾಮಗಳಿಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸಿರುವುದಲ್ಲದೆ, 309 ಕೊಳವೆ ಬಾವಿಗಳನ್ನು ತೋಡಿಸಲಾಗಿದೆ. ಮುಳಬಾಗಿಲು ಪೌರಸಮಿತಿಯ ಪ್ರದೇಶದಲ್ಲೇ 15 ಕೊಳವೆ ಬಾವಿಗಳಿದ್ದು ಅಲ್ಲದೆ ಹೊಸದಾಗಿ 50 ನಲ್ಲಿಗಳನ್ನು ಹಾಕಿಸಲಾಗಿದೆ.

ಸರ್ಕಾರೀ ಜಮೀನುಗಳಲ್ಲಿ ಬಡಜನರು ಸುಮಾರು 1000 ಮನೆಗಳನ್ನು ಕಟ್ಟಿಸಿಕೊಂಡಿದ್ದಾರೆ. ಕೊಳಚೆ ಪ್ರದೇಶಗಳ ಅಭಿವೃದ್ಧಿಗಾಗಿ 5 ಲಕ್ಷ ರೂಪಾಯಿ ವಿನಿಯೋಗಿಸಲಾಗಿದೆ.

ಇನ್ನು 12 ಕೊಳಚೆ ಪ್ರದೇಶಗಳ[illegible] ಗುರುತಿಸಲಾಗಿದ್ದು ಅವುಗಳ ಸು[illegible]ರಣೆಗಾಗಿ ಪ್ರಯತ್ನಿಸಲಾಗುತ್ತಿ[illegible] ನಗರ ಪ್ರದೇಶಗಳಲ್ಲಿ ವಿದ್ಯುತ್ ದಿ[illegible]ಗಳ ವ್ಯವಸ್ಥೆಯನ್ನು ಹೆಚ್ಚಿಸಲಾಗಿ[illegible] 500 ಮನೆಗಳಿಗೆ 'ಭಾಗ್ಯಜ್ಯೋ[illegible] ಯೋಜನೆಯಡಿ ವಿದ್ಯುತ್ ಸೌಲ[illegible] ಮಂಜೂರಾಗಿದೆ.

ಗ್ರಾಮಾಂತರ ಪ್ರದೇಶಗ[illegible] ಹಸಿರು ಕಾರ್ಡ್ ವಿತರಣೆ ಬ[illegible] ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ [illegible] ಮತ್ತು ಕರ್ನಾಟಕ ಪ್ರಾಂತ ರೈತಸಂ[illegible] ಅಪಾರ ಶ್ರಮ ವಹಿಸಿವೆ. ಸಾವಿರಾ[illegible] ಕಾರ್ಡುಗಳನ್ನು ಹಳ್ಳಿ ಹಳ್ಳಿಗಳಲ್ಲಿ ಹಂಚುವಂತೆ ಹೋರಾಟ ನಡೆಸ[illegible]ಗಿದೆ. ಸರ್ಕಾರೀ ಜಮೀನು ವಿ[illegible]ಣೆಯ ಬಗ್ಗೆ, ರೈತರ ಹಿತರಕ್ಷಣೆ[illegible] ಬಗ್ಗೆ ಸತತ ಹೋರಾ[illegible] ನಡೆಸಲಾಗುತ್ತಿದೆ. ಆಹಾರ ಧಾ[illegible] ಗಳನ್ನು ನ್ಯಾಯ ಬೆಲೆಯ[illegible] ವಿತರಿಸುವ ಬಗ್ಗೆ ಹೋರಾ[illegible] ನಡೆದಿದೆ. ಭೂಮಿ ಹಂಚಿಕೆಯ ಬ[illegible] ನೀರು ಕಂದಾಯ ಮತ್ತು ಭ[illegible] ಕಂದಾಯ ರದ್ದತಿಗಾಗಿ ಒತ್ತಾಯಿ[illegible]ಲಾಗುತ್ತಿದೆ.

ಕೆಲವು ಪ್ರಮುಖ ಸೌಲಭ್ಯಗಳನ್ನು ಜನತೆಗೆ ಒದಗಿಸುವುದು ಪಕ್ಷದ ಕರ್ತವ್ಯವಾಗಿದ್ದು ಹಲವಾರು ಸೌಲಭ್ಯಗಳನ್ನು ಒದಗಿಸಲಾಗಿದ್ದು ಇನ್ನು ಹೆಚ್ಚಿನ ಸೌಭ್ಯಗಳಿಗಾಗಿ ಹೋರಾಟ ನಡೆಯುತ್ತಿದೆ.

ಸರ್ಕಾರದಿಂದ 1986ರಲ್ಲಿ ಮುಳಬಾಗಿಲಿನಲ್ಲಿ ನ್ಯಾಯಾಲಯ ಸ್ಥಾಪಿಸಲಾಗಿದೆ. ಇಂಡಸ್ಟ್ರಿಯಲ್ ಎಸ್ಟೇಟ್ ಸರ್ಕಾರದಿಂದ ಮಂಜೂರಾಗಿದ್ದು ಕಟ್ಟುವ ಹಂತದಲ್ಲಿದೆ. ಬಸ್ ಸ್ಟ್ಯಾಂಡ್ ಮತ್ತು ಬಸ್ ಡಿಪೋಗಳ ಸ್ಥಾಪನೆಗೆ ತುರ್ತುಕ್ರಮ ಕೈಗೊಳ್ಳಲಾಗಿದೆ. ಪ್ರವಾಸೋದ್ಯಮ ನಿಗಮವು 15 ಲಕ್ಷ ರೂಪಾಯಿ ವೆಚ್ಚದಲ್ಲಿ ಹೋಟೆಲ್ ಕಟ್ಟಲಿದೆ.

ತಾಲೂಕಿನಲ್ಲಿ ವ್ಯವಸಾಯ, ನೀರಾವರಿ ಅಭಿವೃದ್ಧಿಯ ಬಗ್ಗೆ ಸರ್ಕಾರ ಮತ್ತು ನಮ್ಮ ಪಕ್ಷ ಕೆಲವು ಗುರಿಗಳನ್ನು ಇರಿಸಿಕೊಂಡಿದ್ದು ಅವುಗಳಲ್ಲಿ ಕೆಲವು ಮುಗಿದಿದ್ದು ಕೆಲವನ್ನು ಪ್ರಾರಂಭಿಸಲಾಗಿದೆ.

–ಕಾ॥ ಆರ್. ವೆಂಕಟರಾಮಯ್ಯ

'ಗೂರ್ಖಾಲ್ಯಾಂಡ್' ಚಳುವಳಿಗೆ ಪ್ರೋತ್ಸಾಹ ಸಲ್ಲದು-ನೇಪಾಳ ಕಮ್ಯುನಿಸ್ಟ್ ಪಕ್ಷ

ಗೂರ್ಖಾಲ್ಯಾಂಡ್ ಸ್ಥಾಪಿಸಬೇಕೆನ್ನುವ ನೇಪಾಳೀ ಮಾತನಾಡುವ ಭಾರತೀಯರ ಚಳುವಳಿಯನ್ನು ನೇಪಾಳಿಯರು ಬೆಂಬಲಿಸುವುದು ಸಾಧ್ಯವಿಲ್ಲ, ಈ ರೀತಿ ಮಾಡುವುದು ಬಹು-ಭಾಷಾ ದೇಶವಾದ ನೇಪಾಳದ ಹಿತದೃಷ್ಟಿಯಿಂದಲೂ ಸರಿಯಲ್ಲ ಎಂದು ಪ್ರತಿಬಂಧಿಸಲ್ಪಟ್ಟಿರುವ ನೇಪಾಳ ಕಮ್ಯುನಿಸ್ಟ್ ಪಕ್ಷದ ಪಾಲಿಟ್ ಬ್ಯೂರೋ ಸದಸ್ಯ ನೀಲಾಂಬರ ಆಚಾರ್ಯ ಹೇಳಿದ್ದಾರೆ. ಅವರು 'ಮಾಧ್ಯಮ' ಎಂಬ ನೇಪಾಳದ ಒಂದು ವಾರಪತ್ರಿಕೆಯ ಸಂದರ್ಶನದಲ್ಲಿ ಮಾತನಾಡುತ್ತಿದ್ದರು. ಈ ಆಂದೋಲನ ಪ್ರತ್ಯೇಕತಾವಾದೀ ಸ್ವಭಾವದ್ದಾಗಿದ್ದು ಅದರ ಅಂತಿಮ ಉದ್ದೇಶ ಸಂಶಯಾಸ್ಪದವಾಗಿದೆಯಾದ್ದರಿಂದ ಅದಕ್ಕೆ ಪ್ರೋತ್ಸಾಹ ನೀಡುವುದು ಭಾರತದಲ್ಲಿ ಮಾತ್ರವಲ್ಲ, ನೇಪಾಳದಲ್ಲೂ ಅಸ್ಥಿರತೆಗೆ ಪ್ರೋತ್ಸಾಹ ಕೊಟ್ಟಂತೆ ಎಂದು ನುಡಿದ ಆಚಾರ್ಯ ಅವರು "ಸ್ವಯಂ ನಿರ್ಧಾರ ಹಕ್ಕನ್ನು ಕಮ್ಯುನಿಸ್ಟರು ಬೆಂಬಲಿಸುತ್ತಾರಲ್ಲ" ಎಂಬ ಪ್ರಶ್ನೆಗೆ ಉತ್ತರ ನೀಡುತ್ತಾ "ಸ್ವಯಂನಿರ್ಧಾ[illegible]ರದ ಹಕ್ಕು ಇದೆಯೆಂದರೆ ಅ[illegible] ಜೊತೆಗೆ ಐಕ್ಯತೆಯಿಂದ, ಒಟ್ಟಿ[illegible] ಇರುವ ಹಕ್ಕು ಕೂಡಾ ಸೇರಿದೆ. [illegible] ಕುಟುಂಬ ವಿಭಜಿತಗೊಂಡು ದುರ್ಬ[illegible]ವಾಗಬೇಕೆಂದು ಕಮ್ಯುನಿಸ್ಟರು ಬ[illegible]ಸುವುದಿಲ್ಲ" ಎಂದು ಸ್ಪಷ್ಟವಾಗಿ ಹೇ[illegible]ದರು. ಮುಂದುವರಿದು ಅವ[illegible] "ಬೇರೆ ದೇಶವೊಂದರಲ್ಲಿನ ಆಂದೋಲ[illegible]ವನ್ನು ಆಂದೋಲನಕಾರರು ಯಾ[illegible] ಭಾಷೆಯನ್ನಾಡುತ್ತಾರೆ ಎಂಬುದ[illegible] ಮೇಲೆ ವಿಶ್ಲೇಷಿಸದೆ, ಅದರ ಸ್ವಭಾ[illegible]ವದ ಆಧಾರದಮೇಲೆ ವಿಶ್ಲೇಷಿಸಬೇಕ[illegible] ನೇಪಾಳೀ ಮಾತನಾಡುವ ಭಾರ[illegible]ಯರು ತಮ್ಮ ಚಳುವಳಿಯಲ್ಲಿ ನೇಪಾ[illegible]ವನ್ನು ಎಳೆದು ತರುವುದು ಸರಿಯ[illegible] ಗೂರ್ಖಾಲ್ಯಾಂಡ್ ಚಳುವಳಿ ನೇಪಾ[illegible] ಹಾಗೂ ಭಾರತದ ನಡುವೆ ಕಂದ[illegible] ಏರ್ಪಡಿಸುವ ಪ್ರಯತ್ನದ ಒಂದು ಭಾ[illegible] ಎನ್ನುವುದನ್ನು ಇದೇ ತೋರಿಸುತ್ತ[illegible] ಎಂದರು.

ಬೀಡಿ ಕಾರ್ಮಿಕರ ದಕ್ಷಿಣವಲಯ ಸಮಿತಿ :

ಡಿಸೆಂಬರ್ 17 ರಂದು ಮೂರು ರಾಜ್ಯಗಳಲ್ಲಿ ಬೀಡಿ ಕಾರ್ಮಿಕರ ಮುಷ್ಕರ

ದಿನಾಂಕ 29ರಂದು ಬೆಂಗಳೂರಿನಲ್ಲಿ ನಡೆದ ದಕ್ಷಿಣಾವಲಯ ಬೀಡಿ ಕಾರ್ಮಿಕರ ಫೆಡರೇಷನ್‌ಗಳ ಸಮನ್ವಯ ಸಮಿತಿಯ ಸಭೆ ಏಳು ಬೇಡಿಕೆಗಳು ಈಡೇರಿಕೆಗಾಗಿ ಒತ್ತಾಯಿಸಿ ದಕ್ಷಿಣ ವಲಯದ ಮೂರು ರಾಜ್ಯಗಳಾದ ಕೇರಳ, ತಮಿಳುನಾಡು ಹಾಗು ಕರ್ನಾಟಕಗಳಲ್ಲಿ ಡಿಸೆಂಬರ್ 17ರಂದು ಒಂದು ದಿನದ ಮುಷ್ಕರಕ್ಕಾಗಿ ಕರೆ ನೀಡಿದೆ.

ರೂ. 15 ಕನಿಷ್ಠ ಕೂಲಿ ನೀಡಿಕೆ

ವಿವಿಧ ರಾಜ್ಯಗಳ ಮನಸೋಇಚ್ಛೆಯಂತೆ ಜಾರಿ ಮಾಡಲು ಅವಕಾಶ ನೀಡಿದ ಬೀಡಿ ಮತ್ತು ಸಿಗಾರ್ ಕಾರ್ಮಿಕರ ಕಾನೂನು ಕಡ್ಡಾಯ ಜಾರಿ, ದೇಶದ 60 ಲಕ್ಷ ಬೀಡಿ ಕಾರ್ಮಿಕರಲ್ಲಿ ಕೇವಲ 8 ಲಕ್ಷ ಕಾರ್ಮಿಕರಿಗೆ ಮಾತ್ರ ಅಳವಡಿಸಿರುವ ಪ್ರಾವಿಡೆಂಟ್ ಫಂಡ್ ಕಾನೂನು ಜಾರಿ.

ಕೇರಳದ ಹೆಚ್ಚು ವೇತನ, ಕಾನೂನು ಬದ್ಧ ಎಲ್ಲಾ ಸೌಲಭ್ಯ ನೀಡಿದ ನಂತರವೂ ಶೇ. 13 ರಷ್ಟು ಬೋನಸ್ ನೀಡಲು ಸಾಧ್ಯವೆಂದ ಮೇಲೆ ದೇಶದ ಅನೇಕ ಕಡೆಗಳಲ್ಲಿ ಕನಿಷ್ಠ ಬೋನಸ್ ಕೂಡ ನೀಡದ ವಂಚನೆ ತಪ್ಪಿ ಹೆಚ್ಚು ಬೋನಸ್ ನೀಡಿಕೆ.

ಅನೇಕ ಕಳಪೆ ಬೀಡಿಗಳು ತಯಾರಾಗುತ್ತಿರುವುದನ್ನು ತಪ್ಪಿಸಲು ಎಲ್ಲಾ ಬೀಡಿಗಳ ಮೇಲೂ ಸಮಾನವಾಗಿ ಶೇ. ನಾಲ್ಕು ಎಕ್ಸೈಸ್ ಶುಲ್ಕ ಹೇರಿಕೆ (ಇದರಿಂದ ಕಾರ್ಮಿಕರ ಸ್ಥಿತಿಗತಿಯ ರಕ್ಷಣೆಯ ಜೊತೆಗೆ ಉದ್ಯಮದ ಸ್ಥಿತಿಯೂ ರಕ್ಷಣೆಯಾಗುವುದು ಸರ್ಕಾರಕ್ಕೆ ಆದಾಯ ಹೆಚ್ಚುವುದು)

ಹೆಚ್ಚಿನ ಶಿಕ್ಷಣ ಸೌಲಭ್ಯಕ್ಕಾಗಿ, ಆಸ್ಪತ್ರೆಗಳ ಸೌಲಭ್ಯಕ್ಕಾಗಿ ಹೆಚ್ಚು ಕಾರ್ಮಿಕ ಕಲ್ಯಾಣ ನಿಧಿ ನೀಡಿಕೆ.

ನಿವೃತ್ತಿ ಅಥವಾ ಮರಣದ ಸಮಯದಲ್ಲಿ ಧನ ಸಹಾಯ ಸೌಲಭ್ಯಗಳು

ಬೀಡಿ ಉದ್ಯಮಕ್ಕೆ ಸಂಬಂಧಿಸಿದ ಕೇಂದ್ರ ಸರ್ಕಾರದ ವಿವಿಧ ಸಮಿತಿಗಳಲ್ಲಿ ಪ್ರಾತಿನಿಧ್ಯ - ಕೇಂದ್ರ ಸಲಹಾ ಸಮಿತಿಯಲ್ಲಿ ಪ್ರಾತಿನಿಧ್ಯ.

ಈ ಬೇಡಿಕೆಗಳ ಒತ್ತಾಯಕ್ಕಾಗಿ ಸಾಂಕೇತಿಕ ಮುಷ್ಕರ ಮಾಡುವುದಲ್ಲದೆ ಎಲ್ಲಾ ರಾಜ್ಯಗಳಲ್ಲಿಯೂ ಜಿಲ್ಲಾ ಮಟ್ಟದ, ರಾಜ್ಯ ಮಟ್ಟದ ಸಮಾವೇಶಗಳನ್ನು ನಡೆಸಲು, ಸಮಾವೇಶಗಳಲ್ಲಿ ಈ ಏಳು ಬೇಡಿಕೆಗಳನ್ನು ಪ್ರಚಾರ ಮಾಡಲು ಸಮಿತಿಯ ಸಭೆ ಕರೆ ನೀಡಿದೆ.

ಅಸಂಖ್ಯಾತ ಅಸಂಘಟಿತ ಕಾರ್ಮಿಕರಿರುವ ಬೀಡಿ ಉದ್ಯಮದಲ್ಲಿ ಸಂಘಟನೆಯನ್ನು ದೊಡ್ಡ ಪ್ರಮಾಣದಲ್ಲಿ ವಿಸ್ತರಿಸಬೇಕೆಂದು ಸಮಿತಿ ತೀರ್ಮಾನಿಸಿದೆ.

ಹೊಸಪೇಟೆ :

ಜಿಲ್ಲಾ ಮಟ್ಟದ ಎಸ್. ಎಫ್. ಐ. ಸಮಾವೇಶ

ಭಾರತ ವಿದ್ಯಾರ್ಥಿ ಫೆಡರೇಷನ್ (SFI)ಯ ಬಳ್ಳಾರಿ ಜಿಲ್ಲಾ ಮಟ್ಟದ ಸಮಾವೇಶವು ಹೊಸಪೇಟೆಯಲ್ಲಿ ದಿನಾಂಕ:19-10.86 ರಂದು ಯಶಸ್ವಿಯಾಗಿ ಜರುಗಿತು.

ಸಮಾವೇಶದ ಉದ್ಘಾಟನೆಯನ್ನು ಉಪನ್ಯಾಸಕರಾದ ಶ್ರೀ ಡಿ. ರವಿವರ್ಮ ಅವರು ನೆರವೇರಿಸಿದರು.ಅವರು ಮಾತನಾಡುತ್ತಾ 'ಯಾವುದೇ ಸ್ಪಷ್ಟವಾದ ಮತ್ತು ಮಹತ್ತರವಾದ ಸೈದ್ಧಾಂತಿಕ ತಿಳುವಳಿಕೆ ಇಲ್ಲದಿದ್ದಲ್ಲಿ ಅಂತಹ ಚಳುವಳಿಗಳು ಕೇವಲ ಕ್ಷಣಿಕವಾಗಿರುತ್ತವೆ. ಯಲ್ಲದೇ ಕಾಲಕ್ರಮೇಣ ನಾಶವಾಗಿಬಿಡುತ್ತವೆ. ಆದರೆ ಎಸ್. ಎಫ್. ಐ. ಯ ಧ್ಯೇಯೋದ್ದೇಶ ಕಾರ್ಯ ಚಟುವಟಿಕೆಗಳನ್ನು ನೋಡಿದರೆ ಹಾಗಲ್ಲವೆಂದು ಸ್ಪಷ್ಟವಾಗುತ್ತದೆ ಎಂದರು.

ಸಮಾವೇಶದ ಅತಿಥಿಗಳಾಗಿ ಆಗಮಿಸಿದ್ದ ಡಿ. ವೈ. ಎಫ್. ಐ. ಯ ಜಿಲ್ಲಾ ಕಾರ್ಯದರ್ಶಿ ಎಂ. ಜಂಬಯ್ಯ ನಾಯಕ್ ಮಾತನಾಡುತ್ತಾ, ಅಮೇರಿಕನ್ ಸಾಮ್ರಾಜ್ಯಶಾಹಿ ಶಕ್ತಿಗಳಿಂದ ವಿಶ್ವ ಶಾಂತಿಗೆ ಬಂದಿರುವ ಅಪಾಯ ಹಾಗೂ ಇದೇ ಶಕ್ತಿಗಳಿಂದ ಭಾರತದ ಸಮಗ್ರತೆ, ಏಕತೆ, ಸಾರ್ವಭೌಮತೆಗೆ ಗಂಡಾಂತರವಿರುವುದನ್ನು ವಿವರಿಸಿ ಗಮನ ಸೆಳೆದರು.

ಕರ್ನಾಟಕ ರಾಜ್ಯ ಖಾಸಗಿ ಶಿಕ್ಷಣ ಸಂಸ್ಥೆಗಳ ನೌಕರರ ಸಂಘದ ರಾಜ್ಯ ಉಪಾಧ್ಯಕ್ಷರಾದ ಶ್ರೀ ವೈ. ಭೀಮಸೇನಾಚಾರ್ ಅವರು ಶುಭಕೋರಿ ಮಾತನಾಡಿದರು: ವಿದ್ಯಾರ್ಥಿಗಳು ಕೇವಲ ಪುಸ್ತಕದ ಹುಳುಗಳಾಗದೇ ಸುತ್ತಲಿನ ಸಮಾಜವನ್ನು ಅರಿತು ಮುಂದುವರಿಯಬೇಕೆಂದು ತಿಳಿಸಿದರು.

ಸಮಾವೇಶದ ಅಧ್ಯಕ್ಷತೆಯನ್ನು ಜಿಲ್ಲಾ ಸಮಿತಿಯ ಅಧ್ಯಕ್ಷರಾದ ಕಾಂ. ಎಸ್. ಪ್ರಸನ್ನಕುಮಾರ್ ವಹಿಸಿದ್ದರು.

ಸಮಾವೇಶಕ್ಕೆ ನಗರ ಸಮಿತಿಕಾರ್ಯದರ್ಶಿ ಕಾಂ. ಎಲ್. ಮಂಜುನಾಥ್ ಸ್ವಾಗತ ಬಯಸಿದರು.

ಅಂತರಾಷ್ಟ್ರೀಯ ಮತ್ತು ರಾಷ್ಟ್ರೀಯ ಪರಿಸ್ಥಿತಿ ಕುರಿತು ಕಾಂ; ಪ್ರಸನ್ನ ಕುಮಾರ್, ನೂತನ ಶಿಕ್ಷಣ ನೀತಿಯ ಬಗ್ಗೆ ಜಿಲ್ಲಾ ಸಹಕಾರ್ಯದರ್ಶಿ ಕಾಂ: ಗಂಗಾಧರ್ ವಿವರಿಸಿದರು.

ನಂತರ ಕಳೆದ ಮೂರನೆಯ ಸಮ್ಮೇಳನದಿಂದೀಚೆಗಿನ ಒಟ್ಟು ಚಟುವಟಿಕೆಗಳು, ಸಂಘಟನೆ ವರದಿಯ ಜಿಲ್ಲಾ ಕಾರ್ಯದರ್ಶಿ ಕಾ: ಎಸ್. ವೈ. ಗುರುಶಾಂತ್ ಮಂಡಿಸಿದರು,

ಎಸ್. ಎಫ್. ಐ. ಯ ಬಳ್ಳಾರಿ ಜಿಲ್ಲಾ ಸಮಿತಿಯನ್ನು ಪುನರ್ ಸಂಘಟಿಸಲಾಯಿತು.

21 ಸದಸ್ಯರಿರುವ ಈ ಸಮಿತಿಗೆ ಏಳು ಸದಸ್ಯರ ಕಾರ್ಯದರ್ಶಿ ಮಂಡಳಿಯನ್ನು ರಚಿಸಲಾಯಿತು. ಜಿಲ್ಲಾ ಸಮಿತಿಯ ಅಧ್ಯಕ್ಷರಾಗಿ ಕಾಂ: ಎಸ್, ಪ್ರಸನ್ನ ಕುಮಾರ್, ಕಾರ್ಯದರ್ಶಿ ಕಾ|| ಎಸ್. ವೈ. ಗುರುಶಾಂತ್ ಸಹ ಕಾರ್ಯದರ್ಶಿಯಾಗಿ ಕಾಂ: ಎ. ಜಿ. ಗಂಗಾಧರ್ ಪದಾಧಿಕಾರಿಗಳಾಗಿದ್ದು. ಕಾಂ; ಹೆಚ್, ಚನ್ನಬಸಪ್ಪ. ಕಾಂ: ಎಲ್. ಮಂಜುನಾಥ- ಕಾಂ: ಯು. ಷಣ್ಮುಗಪ್ಪ, ಕಾಂ: ಕಾಶಿಂ ಆಲಿಯವರು ಕಾರ್ಯದರ್ಶಿ ಮಂಡಳಿಯ ಸದಸ್ಯರಾಗಿರುತ್ತಾರೆ.

ಕೊನೆಗೆ ಕಾಂ: ಕಾಶಿಂ ಆಲಿಯವರಿಂದ ವಂದನಾರ್ಪಣೆ ಅರ್ಪಿಸಿದರು.

ರೈತ ಸಂಘದ ಸೈಕಲ್ ಜಾಥಾ

ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲೂಕಿನಿಂದ 29-9-86 ರ ಬೆಂಗಳೂರು ಕಾರ್ಯಕ್ರಮಕ್ಕೆ 1250 ಜನ ರೈತರು, ಕೂಲಿಕಾರರು ಹೋಗಿದ್ದರು. ತಕ್ಷಣ ಅವರೆಲ್ಲರ ಹಳ್ಳಿಗಳಿಗೆ ಸೈಕಲ್ ಜಾತಾ ಹೋಗಿ ಆಯಾ ಗ್ರಾಮಗಳ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ಕಿಸಾನ್ ಸಭಾ ಧೋರಣೆಯನ್ನು ವಿವರಿಸುವ ರೈತಸಂಘದ ಘಟಕಗಳನ್ನು ಪ್ರಾರಂಭಿಸಿ, ಹೋರಾಟಗಳನ್ನು ಬೆಳೆಸುವ ಮತ್ತು ಸಂಘಟನೆಯನ್ನು ವಿಸ್ತರಿಸುವ ನಿರ್ಣಯವನ್ನು ಪ್ರಾಂತರೈತ ಸಂಘದ ತಾಲೂಕು ಕಮಿಟಿ15.10.85 ರಂದು ಸ್ವೀಕರಿಸಿತು. ಇದರಂತೆ 20-10-86ರಿಂದ 14-11-86 ರ ವರೆಗೆ 85 ಹಳ್ಳಿಗಳಿಗೆ ಕಮಿಟಿಯ 10 ಜನ ಸೈಕಲ್‌ಗಳ ಮೇಲೆ ಜಾತಾ ಹೋಗಬೇಕೆಂದು ನಿರ್ಧರಿಸಲಾಯ್ತು. ಮತ್ತು ಇದರ ಪ್ರಕಾರ ಈಗಾಗಲೇ (25-10-96) 25 ಹಳ್ಳಿಗಳ ಒಂದು ಫಿರ್ಕಾವನ್ನು ಜಾತಾ ತಲುಪಿದ್ದು ಅಲ್ಲಿನ ಅನುಭವಗಳು ತುಂಬ ವಿಶಿಷ್ಟವಾಗಿದ್ದು ರೈತ ಸಂಘದ ಬೆಳವಣಿಗೆಗೆ ಸಹಾಯಕವೂ ಪ್ರೋತ್ಸಾಹಕರವೂ ಆಗಿದೆ.

ಬಾಗಳಿ ಫಿರ್ಕಾದ ಈ 25 ಹಳ್ಳಿಗಳಲ್ಲಿ ಪ್ರವಾಸ ಮಾಡಿದ ತಾಲ್ಲೂಕು ಕಮಿಟಿಯ ಮುಂದಾಳತ್ವವನ್ನು ರೈತ ಜಿಲ್ಲಾ ಕಮಿಟಿ ಅಧ್ಯಕ್ಷ ಬಿ. ಪರುಶರಾಂ ವಹಿಸಿದ್ದರು. ಪ್ರತಿಯೊಂದು ಹಳ್ಳಿಯಲ್ಲಿಯೂ ೧)ಘೋಷಣೆ ಸಹಿತ ಮೆರವಣಿಗೆ ೨)ಗೋಡೆ ಬರಹಗಳನ್ನು ಬರೆಯುವುದು ೩)ಭಾಷಣ ೪)ಸಮಸ್ಯೆಗಳ (64 ಪ್ರಶ್ನಾವಳಿಗಳ ಪಟ್ಟಿಯನ್ನು ತುಂಬಿಸುವುದು) ಅಧ್ಯಯನ ಮತ್ತು ಕ್ರೋಡೀಕರಣ 5) ಸದಸ್ಯತ್ವ 6) ಗ್ರಾಮ ಕಮಿಟಿ ರಚನೆ ಈ ಕೆಲಸವನ್ನು ಕಡ್ಡಾಯವಾಗಿ ಮಾಡಲಾಗಿದು ಎಲ್ಲೆಡೆ ಉತ್ಸಾಹ ಮತ್ತು ಸಫಲ ಪ್ರತಿಕ್ರಿಯೆ ಉಂಟಾಗಿದೆ.

ಪ್ರತಿ ಹಳ್ಳಿಯೂ ಜಾತಾ ಸ್ವಾಗತಕ್ಕೆ ಅಲಂಕಾರಗೊಂಡು ವಾದ್ಯ ಸಮೇತ ಕಾಯುತ್ತಿದ್ದುದು ಸರ್ವೆ ಸಾಮಾನ್ಯ ದೃಶ್ಯವಾಗಿತ್ತು. ಸಭೆಗಳಿಗೆ ಹಳ್ಳಿಯ ಲಾಭಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ಹೆಂಗಸರು ಗಂಡಸರು ಸೇರುತ್ತಿದ್ದರು.

ಭೇಟಿ ಕೊಟ್ಟ 25 ಹಳ್ಳಿಗಳ 14 ಲಮಾಣಿ ಜನಾಂಗದ ತಾಂಡಾಗಳಲ್ಲಿ ಪರಿಸ್ಥಿತಿ ಭೀಕರವಾಗಿದ್ದು ಸರಕಾರದ ಯಾವ ಕನಿಷ್ಠ ಸೌಲಭ್ಯವೂ (ಕಾಲೆ ಬಟ್ಟೆ) ಸಿಕ್ಕದೆ ಹೋಗಿದೆ.

ಸರಿಯಾದ ರಸ್ತೆಗಳಿಲ್ಲದ, ವಾಹನ ಸೌಕರ್ಯಗಳಿಲ್ಲದ, ಕುಡಿಯುವ ನೀರಿನ ಬವಣೆ ಇರುವ, ಹಸಿರು ಕಾರ್ಡ ಸೌಲಭ್ಯ ತಲುಪದ, ಆಸ್ಪತ್ರೆಗಳಿಲ್ಲದ, NREP, IRDP ಯೋಜನೆಗಳು ತಲುಪದ ಎಲ್ಲ ಸೌಲಭ್ಯಗಳು ಸಿಕ್ಕದ ಈ ಜನ ತೀರ ಹಿಂದುಳಿದವರಾಗಿದ್ದು ಸಂಘಟನೆ ಮತ್ತು ಹೋರಾಟದ ಅನಿವಾರ್ಯತೆಯನ್ನು ಕಂಡು ಕೊಳ್ಳುತ್ತಿದ್ದಾರೆ.

ಇನ್ನುಳಿದ ಹಳ್ಳಿಗಳಲ್ಲಿ ಅರೆಬರೆ ಸೌಲಭ್ಯಗಳು ಜನರಿಗೆ ದೊರಕಿದ್ದೂ, ಅದನ್ನು ಒದಗಿಸುವ ಅಧಿಕಾರಿಗಳ ಲಂಚಗುಳಿತನ ಭ್ರಷ್ಟಾಚಾರದ ಪರಮಾವಧಿಯಿಂದ ಜನ ರೊಚ್ಚಿಗೆದ್ದಿರುವುದು ಕಂಡು ಬಂತು.

ಬಳ್ಳಾರಿ ಜಿಲ್ಲೆಯ ತೀರ ಹಿಂದುಳಿದ ಹರಪನಹಳ್ಳಿ ತಾಲುಕಿನ ಅತ್ಯಂತ ಹಿಂದುಳಿದ ಈ ಪ್ರದೇಶವು ಭೀಕರ ಬರಗಾಲಕ್ಕೆ ತುತ್ತಾಗಿ ಜನ ಕಾಫಿ ಸೀಮೆಗೆ ವಲಸೆ ಹೋಗಿದ್ದರು. ಅವರೆಲ್ಲ ಈಗ ಪ್ರಾಂತರೈತ ಸಂಘದ ಕುಡಗೋಲು ಸುತ್ತಿಗಳು ಚಿಹ್ನೆಯಡಿ ಸಂಘಟಿರಾಗಿರುತ್ತಿದ್ದು ಹೋರಾಟದ ಹಾದಿಯಿಂದ ಆಶಾದಾಯಕ ಭವಿಷ್ಯದಡೆಗೆ ಹೋಗಲು ತಯಾರಾಗುತ್ತಿದ್ದಾರೆ. ●

ಸಹಕಾರ ಸಂಘದ ಮಹಾಸಭೆ

ಕೆನರಾ ವರ್ಕ್‌ಶಾಪ್ ನೌಕರರ ಸಹಕಾರ ಸಂಘದ 27ನೇ ವಾರ್ಷಿಕ ಮಹಾಸಭೆ ಸೆಪ್ಟಂಬರ್ 27ರ ರಂದು ಸಂಘದ ಆಡಳಿತ ನಿರ್ದೇಶಕರೂ ಮತ್ತು ಗೌರವ ಅಧ್ಯಕ್ಷರೂ ಆಗಿರುವ ಶ್ರೀ ಎಸ್. ವಿ. ಕುಡ್ವಾ ಅವರ ಅಧ್ಯಕ್ಷತೆಯಲ್ಲಿ ಮರೋಳಿಯಲ್ಲಿ ನಡೆಯಿತು. 1986-87ನೇ ಸಾಲಿನ ಮುಂದಿನ 3 ವರ್ಷಗಳ ಅವಧಿಗೆ ಆಡಳಿತ ಮಂಡಳಿಯ ಹೊಸ ನಿರ್ದೇಶಕರಾಗಿ ಸಿ.ಐ.ಟಿ.ಯು. ಗೆ ಸೇರಿದ 7 ಮಂದಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಕಳೆದ 15 ವರ್ಷಗಳಿಂದ ಸಿ.ಐ.ಟಿ.ಯು. ಗೆ ಸೇರಿದ ಸದಸ್ಯರು ಇಂಟಕ್ ಯೂನಿಯನ್ನಿನ ಸದಸ್ಯರೊಡನೆ ಸ್ಪರ್ಧಿಸಿ ಆಡಳಿತ ಮಂಡಳಿಯ ನಿರ್ದೇಶಕರುಗಳಾಗಿ ಆಯ್ಕೆಯಾಗಿ ಸಂಘದ ಪ್ರಗತಿಯನ್ನು ಸಾಧಿಸುತ್ತಿದ್ದಾರೆ. 1986-87 ನೇ ಸಾಲಿನ ಸಂಘದ ಅಧ್ಯಕ್ಷರಾಗಿ ಶ್ರೀ ಸಿ. ನಾರಾಯಣ ಗೌರವ ಅಧ್ಯಕ್ಷರಾಗಿ ಶ್ರೀ ಎಸ್. ವಿ. ಕುಡ್ವಾ, ಉಪಾಧ್ಯಕ್ಷರಾಗಿ ಶ್ರೀ ಯಂ. ಸೋಮಶೇಖರ ಕಾರ್ಯದರ್ಶಿಯಾಗಿ ಶ್ರೀ ಕೆ. ಸದಾನಂದ ಉಪಕಾರ್ಯದರ್ಶಿಯಾಗಿ ಶ್ರೀ ಬಿ. ಮಾಧವ ಕೋಟ್ಯಾನ್ ಚುನಾಯಿತರಾಗಿದ್ದಾರೆ.

ಸೋವಿಯತ್ ರಕ್ಷಣಾ ಸನ್ನದ್ಧತೆ ಮತ್ತು ಶಾಂತಿ ಪ್ರಸ್ತಾಪಗಳು

ಸಾಮ್ರಾಜ್ಯಶಾಹೀ ಜಗತ್ತಿನೊಡನೆ ಮಿಲಿಟರಿ ಸಮಬಲವನ್ನು ಸೋವಿಯತ್ ಒಕ್ಕೂಟ ಸಾಧಿಸಿದ್ದು ಒಂದು ಶಿಸ್ಸೀಮವಾದ ಅಂತರ್ರಾಷ್ಟ್ರೀಯ ಪ್ರಾಮುಖ್ಯತೆಯ ಕೆಲಸ. ಇದು ಜಗತ್ತಿನ ಜನತೆಯ ಪರವಾಗಿ ಮತ್ತು ಸಾಮ್ರಾಜ್ಯಶಾಹಿಯ ವಿರುದ್ಧ ವರ್ಗ ಶಕ್ತಿಗಳ ಸಮತೋಲವನ್ನು ಬದಲಾಯಿಸುತ್ತದೆ. ಸಾಮ್ರಾಜ್ಯಶಾಹಿಗಳ ದುಸ್ಸಾಹಸ ಮತ್ತು ಜಗತ್ತಿನ ಮೇಲೆ ಪ್ರಭುತ್ವ ಹೊಂದುವ ಅದರ ಪ್ರಯತ್ನಗಳಿಗೆ ಇದು ಪ್ರಬಲ ಸವಾಲಾಗಿದೆ. ಸಾಮ್ರಾಜ್ಯಶಾಹಿಗಳ ದಬ್ಬಾಳಿಕೆಗೆ ಬಲಿಯಾಗಿರುವ ದೇಶಗಳು ಮತ್ತು ಜನತೆಗೆ ಸಹಾಯ ನೀಡುವ ಸಂಜೀವಿನಿಯಾಗಿ ಇದು ಬೆಳೆದು ನಿಂತಿದೆ. ಅಮೆರಿಕದ ಒತ್ತಡ ಮತ್ತು ಬ್ಲಾಕ್‌ಮೇಲ್ ತಂತ್ರಗಳನ್ನು ಎದುರಿಸಿ ತಮ್ಮ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲು ಸಣ್ಣಪುಟ್ಟ ದೇಶಗಳು ನಡೆಸುತ್ತಿರುವ ಪ್ರಯತ್ನವನ್ನು ಬಲಪಡಿಸಿಕೊಳ್ಳಲು ಸೋವಿಯತ್ ಯೂನಿಯನ್ ತನ್ನ ಅಮೂಲ್ಯ ಕಾಣಿಕೆಯನ್ನು ಸಲ್ಲಿಸುತ್ತಿದೆ.

ಸಾಮಾಜಿಕ ಮುನ್ನಡೆಯ ಈ ಯೋಜನೆಗಳು ಅತಿ ಮುಖ್ಯವಾದ ಸೋವಿಯತ್ ದೇಶದ ರಕ್ಷಣಾ ವ್ಯವಸ್ಥೆಯನ್ನು ಕಡೆಗಣಿಸಿಲ್ಲ. 27ನೇ ಅಧಿವೇಶನಕ್ಕೆ ಗೋರ್ಬಾಚೋವ್‌ರವರು ನೀಡಿದ ರಾಜಕೀಯ ವರದಿಯಲ್ಲಿ ಹೀಗೆ ಹೇಳಿದ್ದಾರೆ.

"ತುಂಬಾ ಸಂದಿಗ್ಧವಾದ ಅಂತರ್ರಾಷ್ಟ್ರೀಯ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಮತ್ತು ಸಾಮ್ರಾಜ್ಯಶಾಹೀ ವಲಯದಲ್ಲಿ ಬೆಳೆಯುತ್ತಿರುವ ಆಕ್ರಮಣಕಾರೀ ಧೋರಣೆಯನ್ನು ಗಮನದಲ್ಲಿರಿಸಿಕೊಂಡು ಸಿ.ಪಿ.ಎಸ್.ಯು.ನ ಕೇಂದ್ರ ಸಮಿತಿ ಮತ್ತು ಪೋಲಿಟ್‌ಬ್ಯೂರೋ ದೇಶದ ರಕ್ಷಣಾ ಸಾಮರ್ಥ್ಯಕ್ಕೆ ದೃಢವಾದ ಗಮನ ನೀಡಿದೆ.

ಸೋವಿಯತ್ ಯೂನಿಯನ್ನಿನ ಜನತೆಯನ್ನು ಅವರ ಪ್ರಶಾಂತ ಜೀವನವನ್ನು ವಿಶ್ವಾಸಾರ್ಹವಾಗಿ ರಕ್ಷಿಸುವ ಮಟ್ಟದಲ್ಲಿ ಸೋವಿಯತ್ ದೇಶದ ರಕ್ಷಣಾ ಸಾಮರ್ಥ್ಯವನ್ನು ಉಳಿಸಿಕೊಳ್ಳಲಾಗಿದೆಯೆಂದು ಇಂದು ನಾವು ಜವಾಬ್ದಾರಿಯುತವಾಗಿ ಘೋಷಿಸಲು ಸಾಧ್ಯ."

ಸಮಾಜ ಪುನರ್‌ನಿರ್ಮಾಣದ ಯೋಜನೆ ಮತ್ತು ಸೋವಿಯತ್ ಯೂನಿಯನ್‌ನ ರಕ್ಷಣಾ ಸಾಮರ್ಥ್ಯವನ್ನು ಕಾಪಾಡಿಕೊಳ್ಳುವುದು ಜಗತ್ತಿನ ಕಾರ್ಮಿಕ ವರ್ಗಕ್ಕೂ ಮತ್ತು ಅಮೇರಿಕನ್ ಸಾಮ್ರಾಜ್ಯಶಾಹಿ ಮತ್ತದರ ಮಿತ್ರ ರಾಷ್ಟ್ರಗಳ ವಿರುದ್ಧ ಹೋರಾಡುತ್ತಿರುವ ದೇಶಗಳಿಗೂ ಅತ್ಯಂತ ಮುಖ್ಯವಾದ ವಿಷಯವಾಗಿದೆ.

ಎಲ್ಲಾ ದೇಶಗಳ ಕಾರ್ಮಿಕ ವರ್ಗ ಮತ್ತು ಪ್ರಗತಿಪರ ಶಕ್ತಿಗಳು ಆರ್ಥಿಕತೆ ಮತ್ತು ಸಮಾಜವನ್ನು ಪುನರ್ರಚಿಸುವ ಮಹಾನ್ ಕಾರ್ಯಕ್ಕೆ ಧುಮುಕಿರುವ ಸೋವಿಯತ್ ದೇಶಕ್ಕೆ ತಮ್ಮ ಹಾರೈಕೆಗಳನ್ನು ಸಲ್ಲಿಸಿವೆ.

ಕಳೆದ ನವೆಂಬರ್ ತಿಂಗಳಿನಿಂಚಾಚೆಗೆ ಒಂದು ವರ್ಷದ ಅವಧಿಯಲ್ಲಿ ಸೋವಿಯತ್ ಯೂನಿಯನ್ ಜಾಗತಿಕ ಶಾಂತಿಗಾಗಿ ಅನೇಕ ಆರಂಭದ ಹೆಜ್ಜೆಗಳನ್ನು ಇರಿಸಿದೆ. ಸಮಾಜವಾದೀ ವ್ಯವಸ್ಥೆಯು ಯುದ್ಧವನ್ನು ತಿರಸ್ಕರಿಸಿದೆ, ಅದರ ವಿದೇಶಾಂಗ ನೀತಿಯು ಶಾಂತಿ ಮತ್ತು ಶಾಂತಿಯುತ ಸಹಬಾಳ್ವೆಯನ್ನು ಆಧರಿಸಿದೆ. ಅಂತರ್ರಾಷ್ಟ್ರೀಯ ಪರಿಸ್ಥಿತಿಯನ್ನು ಬಿಗಡಾಯಿಸಲು ಸಾಮ್ರಾಜ್ಯಶಾಹಿಗಳು ನಡೆಸುವ ಪ್ರತಿಯೊಂದು ಪ್ರಯತ್ನವನ್ನು ಸೋವಿಯತ್ ಯೂನಿಯನ್ ಹೊಸ ಶಾಂತಿ ಸಲಹೆಗಳನ್ನು ಮುಂದಿಡುವ ಮೂಲಕ ಎದುರಿಸುತ್ತಿದೆ. ಇದು ಎರಡು ವಿಭಿನ್ನ ವ್ಯವಸ್ಥೆಗಳ ವಿದೇಶಾಂಗ ಧೋರಣೆಯ ಪರಸ್ಪರ ವಿರುದ್ಧ ನಿಲುವುಗಳನ್ನು ಎತ್ತಿ ಹಿಡಿದು, ತನ್ನ ಉಳಿವಿಗಾಗಿ ಯುದ್ಧ ಮತ್ತು ನರಮೇಧವನ್ನು ಬಯಸುವ ಸಾಮ್ರಾಜ್ಯಶಾಹಿಗಳ ಮೃಗೀಯ ವ್ಯವಸ್ಥೆಯನ್ನು ಬಹಿರಂಗಗೊಳಿಸುತ್ತದೆ.

ನ್ಯೂಕ್ಲಿಯರ್ ಆಸ್ಫೋಟನೆಯನ್ನು ತಾನು ಮೊದಲಿಗೆ ನಡೆಸುವುದಿಲ್ಲವೆಂಬ ಏಕಪಕ್ಷೀಯ ನಿರ್ಧಾರವನ್ನು ಸೋವಿಯತ್ ಯೂನಿಯನ್ ಎರಡು ಬಾರಿ ಘೋಷಿಸಿದೆ ಮತ್ತು ನ್ಯೂಕ್ಲಿಯರ್ ಪರೀಕ್ಷೆಗಳನ್ನು ನಿಲ್ಲಿಸಲು ಮಾತುಕತೆ ನಡೆಸಲು ಮುಂದೆ ಬಂದಿದೆ.

ಕಳೆದ ಜನವರಿ 15ರಂದು ಅದು ಮಾಡಿರುವ ಐತಿಹಾಸಿಕ ಸಲಹೆಯಲ್ಲಿ ಸಾಮೂಹಿಕ ವಿನಾಶದ ಅಸ್ತ್ರಗಳನ್ನು ನಿರ್ಮೂಲನ ಮಾಡಲು ಮತ್ತು ಇನ್ನಿತರ ಅಸ್ತ್ರಗಳ ಪ್ರಮಾಣವನ್ನು ಕಡಿತಗೊಳಿಸಲು ಮುಂದೆ ಬಂದಿದೆ. ಈ ಕಾರ್ಯಕ್ರಮವನ್ನು ಮೂರು ಹಂತಗಳಲ್ಲಿ ಜಾರಿಗೊಳಿಸಬೇಕಾಗಿದೆ. 1999ರ ಅಂತ್ಯದ ವೇಳೆಗೆ ಈ ಭೂಮಂಡಲದ ಮೇಲೆ ಅದು ಅಸ್ತ್ರಗಳು ಇರಲೇ ಬಾರದೆಂಬ ಮತ್ತು ಇದಕ್ಕಾಗಿ ಒಂದು ಜಾಗತಿಕ ಒಪ್ಪಂದಕ್ಕೆ ಬರಬೇಕೆಂದು ಅದು ಒತ್ತಾಯಿಸಿದೆ.

ಸೋವಿಯತ್ ಒಕ್ಕೂಟದ ಈ ಐತಿಹಾಸಿಕ ಸಲಹೆಯನ್ನು ಅಮೆರಿಕವು ಅವಾಸ್ತವವಾದುದೆಂದೂ ಪ್ರಚಾರ ಉದ್ದೇಶಕ್ಕಾಗಿ ಮಾಡಿರುವುದಾಗಿಯೂ ಟೀಕಿಸಿ ಸಲಹೆಯನ್ನು ತಿರಸ್ಕರಿಸಿದೆ. ಆದರೆ ಸೋವಿಯತ್ ಒಕ್ಕೂಟ ಶಾಂತಿಗಾಗಿನ ತನ್ನ ಹೋರಾಟವನ್ನು ಮುಂದುವರಿಸಿದೆ. ಯೂರೋಪಿಯನ್ ಸರ್ಕಾರಗಳು ಗಂಡಾಂತರ ಕ್ಷಿಪಣಿಗಳು ಮತ್ತಿತರ ಅಸ್ತ್ರಗಳ ಬಗ್ಗೆ ಹೊಂದಿರುವ ಭೀತಿಯನ್ನು ಗಮನದಲ್ಲಿರಿಸಿಕೊಂಡು ಅಮೆರಿಕ ಮತ್ತು ರಶ್ಯ ದೇಶಗಳೆರಡೂ ಯೂರೋಪಿನಿಂದ ಕ್ಷಿಪಣಿಗಳನ್ನು ಹಿಂತೆಗೆದುಕೊಳ್ಳಬೇಕೆಂಬ ಸಲಹೆಯನ್ನು ಸೋವಿಯತ್ ಯೂನಿಯನ್ ಮುಂದಿಟ್ಟಿದೆ. ಆದರೆ ಅಮೆರಿಕ ತನ್ನ ಪರ್ಶಿಂಗ್ ಮತ್ತು ಕ್ರೂಯಿಸ್ ಕ್ಷಿಪಣಿಗಳನ್ನು ಯೂರೋಪಿನಿಂದ ಹಿಂತೆಗೆದುಕೊಳ್ಳಲು ನಿರಾಕರಿಸಿದೆ.

ಕೇಂದ್ರವೊಂದನ್ನು ಸ್ಥಾಪಿಸಿ ರಶ್ಯದ ವಿರುದ್ಧ ಮತ್ತೊಂದು ನ್ಯೂಕ್ಲಿಯರ್ ರಂಗವೊಂದನ್ನು ಆರಂಭಿಸಲು ಪ್ರಯತ್ನಿಸುತ್ತಿದೆ. ಈ ಮೂಲಕ ಈ ಪ್ರದೇಶದ ರಾಷ್ಟ್ರಗಳ ಮೇಲೆ ಒತ್ತಡ ತಂದು, ಬ್ಲಾಕ್‌ಮೇಲ್ ನಡೆಸಿ ತನಗೆ ಶರಣಾಗುವಂತೆ ಮಾಡಲು ಅಮೇರಿಕ ಉದ್ದೇಶಿಸಿದೆ. ಎರಡು ವರ್ಷಗಳ ಹಿಂದೆ ತನ್ನ ಜಾಗತಿಕ ಭದ್ರತೆಯ ರಕ್ಷಣೆಗಾಗಿ ಜಪಾನ್ ಅನ್ನು ತಮ್ಮ ಸಕ್ರಿಯ ಪಾಲುದಾರನನ್ನಾಗಿ ಸಾಮ್ರಾಜ್ಯಶಾಹಿ ತನ್ನೆಡೆಗೆ ಸೆಳೆದುಕೊಂಡಿತು. ತಾರಾಯುದ್ಧದ ಯೋಜನೆಯಲ್ಲಿ ತನ್ನ ದೇಶದ ಖಾಸಗೀ ಸಂಸ್ಥೆಗಳು ಮತ್ತು ಸಾರ್ವಜನಿಕ ಸಂಸ್ಥೆಗಳು ಭಾಗವಹಿಸುತ್ತವೆಂದು ಇತ್ತೀಚೆಗೆ ಜಪಾನ್ ಘೋಷಿಸಿದೆ.

ಜಾಗತಿಕ ಶಾಂತಿಗಾಗಿ ನಡೆಯುವ ಚರ್ಚೆಯನ್ನು ತಪ್ಪಿಸಲು ಅಮೇರಿಕದ ಆಡಳಿತ ಪ್ರಚೋದನಾ ಕಾರ್ಯಗಳಿಗೆ ಇಳಿದಿದೆ. ಗೋರ್ಬಾಚೆವ್‌ರವರು "ಈ ಬಗ್ಗೆ ಅಮೆರಿಕದ ಯುದ್ಧಕೋರರನ್ನು ಎಚ್ಚರಿಸಿದ್ದಾರೆ. ಸರ್ವಸಾಮಾನ್ಯ ಪರಿಜ್ಞಾನಕ್ಕೆ ವಿರುದ್ಧವಾಗಿ ಅಮೆರಿಕವು ಇದೇ ನೀತಿಯನ್ನು ಮುಂದುವರಿಸಿದರೆ ನಾವು ಅದಕ್ಕೆ ತಕ್ಕ ಉತ್ತರವನ್ನು ಕೊಡುತ್ತೇವೆ. ನಮಗೆ ಸಮಕಾಲಿನ ವಿಜ್ಞಾನದ ಶಕ್ತಿಗಳ ಬಗ್ಗೆ ನಮ್ಮಲ್ಲೇ ಇರುವ ಸಾಮರ್ಥ್ಯದ ಬಗ್ಗೆ ಚೆನ್ನಾಗಿಗೊತ್ತಿದೆ. ಅಮೆರಿಕದಿಂದ ಸಾಧ್ಯವಾಗುವುದೆಲ್ಲಾ ನಮ್ಮಿಂದಲೂ ಸಾಧ್ಯವಾಗುತ್ತದೆ. ಆದರೆ ನಾವು ಅದನ್ನು ಇಚ್ಛಿಸುವುದಿಲ್ಲ. ಶಸ್ತ್ರಾಸ್ತ್ರಗಳ ಬಗ್ಗೆ ಅಮೆರಿಕದ ಅಸಂಬದ್ಧ ತರ್ಕವನ್ನು ನಾವು ವಿರೋಧಿಸುತ್ತೇವೆ."

ಬಾಹ್ಯಾಕಾಶಕ್ಕೆ ನ್ಯೂಕ್ಲಿಯರ್ ಅಸ್ತ್ರಗಳನ್ನು ಕೊಂಡೊಯ್ಯುವ ಯೋಜನೆಯನ್ನು ಕೈಬಿಡಲು ಅಮೆರಿಕವು ನಿರಾಕರಿಸಿದೆ. ಶಸ್ತ್ರಾಸ್ತ್ರಗಳನ್ನು ತಯಾರಿಸಲು ಬೃಹತ್ ಕಂಪನಿಗಳೊಂದಿಗೆ ಒಪ್ಪಂದ ಮಾಡಿಕೊಂಡು ಶಸ್ತ್ರಾಸ್ತ್ರ ಪೈಪೋಟಿಯನ್ನು ತೀವ್ರಗೊಳಿಸಿದೆ.

ಅಮೇರಿಕವು ತನ್ನ ತಾರಾಯುದ್ಧದ ಕಾರ್ಯಕ್ರಮಕ್ಕೆ ಗುತ್ತೇದಾರಿ ಕಂಪೆನಿಗಳನ್ನು, ಅನೇಕ ಯೂರೋಪಿಯನ್ ರಾಷ್ಟ್ರಗಳನ್ನು ಮತ್ತು ಜಪಾನ್ ದೇಶವನ್ನು ತನ್ನತ್ತ ಸೆಳೆದುಕೊಳ್ಳುವ ಪ್ರಯತ್ನವನ್ನು ಸತತವಾಗಿ ನಡೆಸುತ್ತಿದೆ.

ಇದಲ್ಲದೆ ಅಮೆರಿಕವು ಏಶಿಯಾದ ಪೆಸಿಫಿಕ್ ಪ್ರದೇಶದಲ್ಲಿ ನೇಟೋದ

(೮ನೇ ಪುಟ ನೋಡಿ)

ಸೋವಿಯೆತ್ ವಿಜ್ಞಾನದ ಮೇಲ್ಮೈ

ಸೋವಿಯೆತ್ ವೈಜ್ಞಾನಿಕ ಪ್ರಗತಿ ಪಾಶ್ಚಿಮಾತ್ಯ ಬಂಡವಾಳಶಾಹಿ ದೇಶಗಳಿಗಿಂತ ಬಹಳ ಹಿಂದಿದೆಯೆಂದು ಪ್ರಚಾರ ಮಾಡಲಾಗುತ್ತಿದೆ. ಈ ಕೆಲವು ಅಂಕೆಸಂಖ್ಯೆಗಳನ್ನು ನೋಡಿ.

ಸೋವಿಯೆತ್ ವಿದೇಶವಾಣಿಜ್ಯ ಸಂಸ್ಥೆ ಇದುವರೆಗೆ ಸೋವಿಯೆತ್ ಸಂಶೋಧನೆಯನ್ನು ಬಳಸಲು 1500 ಲೈಸೆನ್ಸ್‌ಗಳನ್ನು 20 ಬಂಡವಾಳಶಾಹಿ ದೇಶಗಳ ಕಂಪನಿಗಳಿಗೆ ನೀಡಿದೆ. ಇವುಗಳಲ್ಲಿ 30ಕ್ಕೂ ಹೆಚ್ಚನ್ನು ಅಮೇರಿಕಾ, ಪಶ್ಚಿಮ ಜರ್ಮನಿ, ಫ್ರಾನ್ಸ್, ಬ್ರಿಟನ್ ಹಾಗೂ ಇಟಲಿ ಪಡೆದಿವೆ. ಸೋವಿಯೆತ್ ಸಹಕಾರದಿಂದ ಪಡೆದ ಥರ್ಮೋನ್ಯೂಕ್ಲಿಯರ್ ಫ್ಯೂಷನ್ ಪರಮಾಣುಗಳ ತಾಡನೆಯಿಂದ ಶಕ್ತಿಯನ್ನು ಉತ್ಪಾದಿಸುವುದು. ಕುರಿತಾದ ವಿವರ ಅಮೇರಿಕನ್ನರಿಗೆ ಎರಡು ವರ್ಷಗಳ ಶ್ರಮವನ್ನು ಹಾಗೂ 1 ಕೋಟಿ ಡಾಲರುಗಳನ್ನು ಉಳಿಸಿತು.

ಸಮಾಜವಾದೀ ದೇಶಗಳಲ್ಲಿ ಮಾತ್ರವೇ ದೊರೆಯುವ ಹಕ್ಕು

ಸೋವಿಯತ್ ಒಕ್ಕೂಟ ಸಂವಿಧಾನ ಮತದಾರರಿಗೆ ಕೊಟ್ಟಿರುವ ಇನ್ನೊಂದು ಮುಖ್ಯ ಹಕ್ಕೆಂದರೆ—ಚುನಾಯಿತ ಪ್ರತಿನಿಧಿಗಳ ಕೆಲಸ ನಿರ್ವಹಿಸದಿದ್ದಾಗ ಅವರನ್ನು ತೆಗೆದು ಹಾಕುವ ಹಕ್ಕು ಈ ಪ್ರಕಾರ 1960 ರಿಂದೀಚೆಗೆ ಸೋವಿಯತ್ ಒಕ್ಕೂಟದ ಸುಪ್ರೀಂ ಸೋವಿಯತ್‌ನಿಂದ 13 ಪ್ರತಿನಿಧಿಗಳ ಒಕ್ಕೂಟದ ಗಣತಂತ್ರ ಹಾಗೂ ಸ್ವಾಯತ್ತ ಗಣತಂತ್ರಗಳ ಸುಪ್ರೀಂ ಸೋವಿಯತ್‌ನಿಂದ ಸುಮಾರು 100 ಪ್ರತಿನಿಧಿಗಳನ್ನೂ ಸೇರಿದಂತೆ ಒಟ್ಟು 9000 ಪ್ರತಿನಿಧಿಗಳನ್ನೂ ಸೋವಿಯತ್ ಮತದಾರರು ತೆಗೆದುಹಾಕಿದ್ದಾರೆ.

ಚುನಾಯಿತ ಪ್ರತಿನಿಧಿಗಳಲ್ಲದೆ ಸುಮಾರಾಗಿ ಪ್ರತಿಯೊಬ್ಬ ನಾಗರೀಕನೂ ಪ್ರಜಾಪ್ರಭುತ್ವ ಆಡಳಿತದಲ್ಲಿ ನೇರವಾಗಿ ಭಾಗವಹಿಸುತ್ತಾನೆ. ಈ ಕೆಲವು ಅಂಕೆ-ಸಂಖ್ಯೆ ಗಮನಿಸಿ ಚುನಾಯಿತ ಪ್ರತಿನಿಧಿಗಳಿಗೆ ಅದರ ದಿನನಿತ್ಯದ ಕೆಲಸಕಾರ್ಯಗಳಲ್ಲಿ 3 ಕೋಟಿ 10 ಲಕ್ಷ ಮಂದಿ ಸ್ವಯಂ ಪ್ರೇರಣೆಯಿಂದ ನೆರವು ನೀಡುತ್ತಿದ್ದಾರೆ. ನ್ಯಾಯಾಂಗ ಸಂಸ್ಥೆಗಳಲ್ಲಿ ದುಡಿಯುವ ಜನರ 6 ಲಕ್ಷಕ್ಕೂ ಹೆಚ್ಚು ಮಂದಿ ಪ್ರತಿನಿಧಿಗಳು ಕಾರ್ಯನಿರತರಾಗಿದ್ದಾರೆ.

ಕೈಗಾರಿಕಾ ವಲಯದ ಉಸ್ತುವಾರಿ ನೋಡಿಕೊಳ್ಳಲು 1 ಕೋಟಿ ಜನತಾ ಇನ್ಸ್‌ಪೆಕ್ಟರುಗಳಿದ್ದಾರೆ. 1 ಲಕ್ಷ 40 ಸಾವಿರ ಸ್ಥಾಯೀ ಉತ್ಪಾದನಾ ಸಮ್ಮೇಳನಗಳಲ್ಲಿ ಸುಮಾರು 4 ಕೋಟಿ ಜನ ಉಸ್ತುವಾರಿ ನೋಡಿಕೊಳ್ಳುವ ಕೆಲಸದಲ್ಲಿ ನಿರತರಾಗಿದ್ದಾರೆ (ಇವರಲ್ಲಿ 64./. ಕಾರ್ಮಿಕರು)

ಕಾರ್ಮಿಕ ಸಂಘಗಳಲ್ಲಿ ಸ್ವಯಂ ಪ್ರೇರಿತ ಆಯೋಗಗಳಲ್ಲಿ 5 ಕೋಟಿ ಜನ ನೆರವಾಗುತ್ತಿದ್ದಾರೆ.

ಸೋವಿಯತ್ ದೇಶದ ಸಕಲಯನ್ನು ಸಾಮ್ರಾಜ್ಯಶಾಹಿಗಳು ನಿರಾಕರಿಸಿದರೆ ದುಡಿಯುವ ವರ್ಗ ಮತ್ತು ಜನತೆ ಶಾಂತಿ ಸಂರಕ್ಷಣೆಗಾಗಿ ಸೋವಿಯತ್ ಯೂನಿಯನ್ ನಡೆಸುತ್ತಿರುವ ಹೋರಾಟವನ್ನು ಅಭಿನಂದಿಸಿ ಬೆಂಬಲಿಸುತ್ತಿದ್ದಾರೆ. ಶಸ್ತ್ರಾಸ್ತ್ರ ಪೈಪೋಟಿಗೆ ಮತ್ತು ಶಾಂತಿ ಚಳುವಳಿಯ ಒಡಕಿಗೆ ಸಮಾಜವಾದೀ ದೇಶಗಳೇ ಜವಾಬ್ದಾರರೆಂದು ಸಾಧಿಸುವ ಸಾಮ್ರಾಜ್ಯಶಾಹಿಗಳ ಪ್ರಯತ್ನ ವಿಫಲವಾಗಿದೆ. ಶಾಂತಿ ಚಳವಳಿಯು ವಿಸ್ತಾರಗೊಳ್ಳುತ್ತಾ ಹೊಸ ವಿಭಾಗಗಳಿಗೆ ಹರಡುತ್ತಿದೆ. ಮಹಿಳೆಯರ ಮತ್ತು ಯುವಜನರ ಭಾಗವಹಿಸುವಿಕೆ ತೀವ್ರಗೊಳ್ಳುತ್ತಿದೆ. ಎಲ್ಲಾ ಭೇದ ಭಾವಗಳನ್ನು ಬದಿಗಿರಿಸಿ ಕಾರ್ಮಿಕ ಸಂಘಟನೆಗಳು ಐಕ್ಯತೆಯಿಂದ ಶಾಂತಿ ಚಳವಳಿಗೆಗೆ ಧುಮುಕಿವೆ. ಅಲಿಪ್ತ ದೇಶಗಳ ಬೆಂಬಲವನ್ನು ಚಳುವಳಿ ಪಡೆದುಕೊಂಡಿದೆ. ಹರಾರೆಯಲ್ಲಿ ನಡೆದ ಶೃಂಗ ಸಮ್ಮೇಳನ ಏಕಕಂಠದಿಂದ ಅಮೆರಿಕದ ಯುದ್ಧಕೋರ ನೀತಿಯನ್ನು ಖಂಡಿಸಿ ಶಾಂತಿ ಚಳುವಳಿಯನ್ನು ಬೆಂಬಲಿಸಿದೆ.

ಈ ಸಲದ ನವೆಂಬರ್ 7ರಂದು ಅಂತರ್ರಾಷ್ಟ್ರೀಯ ಕಾರ್ಮಿಕ ವರ್ಗ ಸೋವಿಯತ್ ಶಾಂತಿ ಸಲಹೆಗಳನ್ನು ಬೆಂಬಲಿಸಿ ತನ್ನ ಪತಾಕೆಯನ್ನು ಎತ್ತಿ ಹಿಡಿಯುತ್ತದೆ.

ಜಾಗತಿಕ ಶಾಂತಿಗಾಗಿ ಹೋರಾಡುತ್ತಿರುವ ಸೋವಿಯತ್ ಜನತೆಗೆ ಮತ್ತು ಕಾರ್ಮಿಕ ವರ್ಗಕ್ಕೆ ಭಾರತದ ಜನತೆ ಮತ್ತು ಕಾರ್ಮಿಕವರ್ಗ ತನ್ನ ಶುಭಾಶಯಗಳನ್ನು ಕಳಿಹಿಸುತ್ತದೆ. ಸಮಾನತೆಯ ಆಧಾರದ ಮೇಲೆ ಭಾರತ ಮತ್ತು ಸೋವಿಯತ್ ಯೂನಿಯಂನ ಮೈತ್ರಿ ದೃಢವಾಗಿದೆ ಮತ್ತು ಅಭಿವೃದ್ಧಿ ಹೊಂದುತ್ತಿದೆ.

ಗೋರ್ಬಾಚೋವ್‌ರವರು ತಮ್ಮ ವ್ಯಾದಿವೋಸ್ತಾರ ಭಾಷಣದಲ್ಲಿ ಭಾರತದ ಜನತೆಯ ಬಗ್ಗೆ ಒಳ್ಳೆಯ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ಅಲಿಪ್ತ ಚಳುವಳಿಯಲ್ಲಿ ಭಾರತದ ಪಾತ್ರವನ್ನು ಪ್ರಶಂಸಿಸುತ್ತಾ ಅವರು "ಅಂತರಾಷ್ಟ್ರೀಯ ಸಮುದಾಯದಲ್ಲಿ ಸಮಾನ ಸಹಬಾಳ್ವೆಗೆ ಮತ್ತು ನ್ಯಾಯಕ್ಕಾಗಿ ಅಲಿಪ್ತ ಚಳುವಳಿ ನೀಡಿರುವ ಕಾಣಿಕೆಯನ್ನು ನಾವು ಅರಿತಿದ್ದೇವೆ. ಸೋವಿಯತ್ ಯೂನಿಯನ್ ಮತ್ತು ಇಂಡಿಯಾದ ನಡುವಿನ ಸ್ನೇಹ ಸಂಬಂಧಗಳು ಜಾಗತಿಕ ಮಟ್ಟದಲ್ಲಿ ತುಂಬಾ ಶಕ್ತಿಶಾಲಿ ಅಂಶವಾಗಿದೆ".

ಭಾರತ–ಸೋವಿಯತ್ ಮೈತ್ರಿಯ ಅಂತರಾಷ್ಟ್ರೀಯ ಮಹತ್ವವನ್ನು ಭಾರತದ ಕಾರ್ಮಿಕವರ್ಗ ಅರಿತುಕೊಂಡಿದೆ ಮತ್ತು ಶಾಂತಿಗಾಗಿ ನಡೆಸುವ ಹೋರಾಟದ ಒಂದು ಭಾಗವಾಗಿ ಮೈತ್ರಿಯನ್ನು ಬಲಪಡಿಸ ನಿಶ್ಚಯಿಸಿದೆ. ○

ನವೆಂಬರ್ - 7, ದುಡಿವ ಜನ ಮರೆಯಲಾಗದ ದಿನ

–ಬಿ. ಟಿ. ರಣದಿವೆ

ನವೆಂಬರ್ 7 ಜಗತ್ತಿನ ಕಾರ್ಮಿಕ ವರ್ಗಕ್ಕೆ ದುಡಿಯುವ ಜನತೆಗೆ ಅವರ ಜೀವನದ ಕತ್ತಲನ್ನೆಲ್ಲಾ ಕಳೆಯುವೊಂದು ಹೊಸ ಬೆಳಕು ಸಮಾಜವಾದಿ ಜಗತ್ತು ಉದಿಸಿದ ದಿನ ರೋಗದಿಂದ ನರಳುತ್ತಿರುವ ಮರಣಭಯದಿಂದ ಹಿಂಸ್ರಪಶುವಾಗಿರುವ ಅಭಿವೃದ್ಧಿಹೊಂದಿದ ಬಂಡವಾಳಶಾಹಿಗೆ ಪ್ರತಿಯಾಗಿ ಸಮಾಜವಾದಿ ಜಗತ್ತು ಅಭಿವೃದ್ಧಿ ಹೊಂದಿದ ಸಮಾಜವನ್ನು ಆರೋಗ್ಯದಿಂದಆಕಲಕಿಸುತ್ತಿರುವ ಸಮಾಜನನ್ನು ಬೆಳೆಯುತ್ತಿರುವ ಸಮಜವನ್ನು ಜಗತ್ತಿನ ಮುಂದಿರಿಸಿದೆ ವಿವರಗಳನ್ನು ಕಾ|| ಬಿ.ಟಿ. ಆರ್‌ರವರ ಮಾತುಗಳಲ್ಲಿಯೇ ಕೇಳಿ.

ಈ ವರ್ಷದ ನವೆಂಬರ್ 7, ಸೋವಿಯತ್ ಯೂನಿಯನಿನ ದುಡಿಯುವ ವರ್ಗ ಹಾಗೂ ಜನತೆ, ಪ್ರಪಂಚದಲ್ಲಿ ಶಾಂತಿಯನ್ನು ಸ್ಥಾಪಿಸಲು ನಡೆಸುತ್ತಿರುವ ಮಹಾನ್ ಹೋರಾಟದ ಜೊತೆಯಲ್ಲಿಯೇ ಹಿಂದೆಂದೂ ಕಂಡರಿಯದಂತಹ ಆರ್ಥಿಕ ಮುನ್ನಡೆಯನ್ನು ಸಾಧಿಸಿರುವುದನ್ನು ಕಂಡಿದೆ. 1986-90 ರ ಆರ್ಥಿಕ ಯೋಜನೆ ಮತ್ತು ಹೊಸ ಕಾರ್ಯಕ್ರಮವೊಂದನ್ನು ಸೋವಿಯತ್ ಕಮ್ಯುನಿಸ್ಟ್ ಪಕ್ಷದ 27 ನೇ ಅಧಿವೇಶನವು ಅಂಗೀಕರಿಸಿತು. ಅದು ಸಮಾಜವಾದೀ ಉತ್ಪಾದನೆಯಲ್ಲಿ ಒಂದು ಹೊಸ ದಾರಿಯನ್ನು ನಿರ್ಮಿಸುತ್ತಿದೆ. ವಿಜ್ಞಾನ ಮತ್ತು ತಂತ್ರಜ್ಞಾನಗಳ ಸಾಧನೆಗಳನ್ನು ಸಂಪೂರ್ಣವಾಗಿ ಬಳಸಿಕೊಂಡು ಮನುಕುಲದ ಪ್ರಗತಿ ಮತ್ತು ಸಮೃದ್ಧತೆಯ ಹೊಸ ದಿಗಂತವನ್ನು ಅನಾವರಣಗೊಳಿಸಿದೆ. ಇಡೀ ಬಂಡವಾಳ ಶಾಹೀ ಜಗತ್ತು ತನ್ನನ್ನು ಆವರಿಸಿಕೊಂಡಿರುವ ಮತ್ತು ಭೀಕರ ನಿರುದ್ಯೋಗದ ಸಮಸ್ಯೆಗಳಿಗೆ ತುತ್ತಾಗಿರುವವರ ಸಮಯದಲ್ಲಿ ಸೋವಿಯತ್ ಒಕ್ಕೂಟದ 12ನೇ ಪಂಚವಾರ್ಷಿಕ ಯೋಜನೆ ಮತ್ತು ಹೊಸ ಕಾರ್ಯಕ್ರಮದ ಪ್ರಕಾರ ಹೊಸ ಆಶಾಕಿರಣವಾಗಿದೆ. ಮಾನವಕುಲದ ವಿಮುಕ್ತಿಯ ಪ್ರಚಂಡ ಸಾಧನವಾಗಿರುವ ವೈಜ್ಞಾನಿಕ ಹಾಗೂ ತಾಂತ್ರಿಕ ಕ್ರಾಂತಿಯ ಬಂಡವಾಳಶಾಹೀ ಸಮಾಜದ ಮಟ್ಟಿಗೆ ಒಂದು ದೊಡ್ಡ ಶಾಪವಾಗಿದೆ. ವೈಜ್ಞಾನಿಕ ಸಾಧನೆಗಳನ್ನು ಸಮಾಜಕ್ಕಾಗಿ ಬಳಸಿಕೊಳ್ಳುವ ಬಂಡವಾಳಶಾಹಿಯ ಯತ್ನ ಅರ್ಥ ವ್ಯವಸ್ಥೆಯಲ್ಲಿ ಅರಾಜಕತೆಯನ್ನು ಸೃಷ್ಟಿಸುವುದಲ್ಲದೆ ಮಿಲಿಯ ಗಟ್ಟಲೆ ಜನತೆಯನ್ನು ಉದ್ಯೋಗ ಮತ್ತು ವರಮಾನಗಳಿಲ್ಲದ ಬದುಕಿಗೆ ನೂಕುವಂತಹ ಕಠೋರ ಪರಿಸ್ಥಿತಿಯನ್ನು ನಿರ್ಮಿಸಿದೆ. ಇದು ಬಂಡವಾಳಶಾಹೀ ವ್ಯವಸ್ಥೆಗೆ ಇತಿಹಾಸ ನೀಡುತ್ತಿರುವ ಸಾವಿನ ಸೂಚನೆಯಾಗಿದೆ. ಉತ್ಪಾದನಾ ಸಾಧನಗಳ ಸಾಮಾಜಿಕ ಒಡೆತನವಿರುವ, ಸಮಾಜದ ಎಲ್ಲರ ಹಿತಕ್ಕಾಗಿ ಉತ್ಪಾದನಾ ಶಕ್ತಿಯನ್ನು ಬಳಸಿಕೊಳ್ಳುವ ಸಮಾಜ ಮಾತ್ರವೇ ಹೊಸ ಶಕ್ತಿಗಳನ್ನು ಇಡಿಯಾಗಿ ಬಳಸಿಕೊಳ್ಳಲು ಸಾಧ್ಯವೆಂಬುದನ್ನು ಪ್ರಸ್ತುತ ವಿದ್ಯಮಾನಗಳು ಜಗಜ್ಜಾಹೀರು ಮಾಡ್ತಿವೆ.

ಈ ವರ್ಷದ ನವೆಂಬರ್ 7 ಕ್ಕೆ ಸೋವಿಯತ್ ಒಕ್ಕೂಟದ ಸಮಾಜವಾದಿ ವ್ಯವಸ್ಥೆಯ ಸ್ಫೂರ್ತಿದಾಯಕ ಸಾಧನೆಗಳನ್ನು ಮುಂದಿಟ್ಟಿರುವುದಲ್ಲದೆ ಮುಂಬರುವ ವರ್ಷಗಳಲ್ಲಿ ಇನ್ನೂ ಹೆಚ್ಚಿನ ಸಾಧನೆಗಳನ್ನು ನೀಡುವ ಭರವಸೆ ಕೊಟ್ಟಿದೆ.

1981-85 ರ ರಾಷ್ಟ್ರೀಯ ಆದಾಯವು ಶೇ. 77 ರಷ್ಟು ಹೆಚ್ಚಿದೆ. ಇದರಲ್ಲಿ ಸಾಮಾಜಿಕ ಶ್ರಮದ ಉತ್ಪಾದಕತೆಯಲ್ಲಿಯ ಹೆಚ್ಚಳದ ಈ ರಾಷ್ಟ್ರೀಯ ಈ ರಾಷ್ಟ್ರೀಯ ಆದಾಯ ಹೆಚ್ಚಳದ ಶೇ. 90 ಭಾಗದಷ್ಟಿದೆ. ಕೈಗಾರಿಕಾ ರಂಗದ ಉತ್ಪಾದನೆ ಶೇ. 20 ರಷ್ಟು ಹೆಚ್ಚಿದೆ ಪೆಟ್ರೋಲಿಯಂ ಉತ್ಪಾದನೆಯಲ್ಲಿ ಜಗತ್ತಿನಲ್ಲೇ ಮೊದಲ ಸ್ಥಾನದಲ್ಲಿರುವ ಸೋವಿಯತ್ ಯೂನಿಯನ್ ಈಗ ನೈಸರ್ಗಿಕ ಅನಿಲದ ಉತ್ಪಾದನೆಯಲ್ಲಿ ಜಗತ್ತಿನಲ್ಲೇ ಅತಿ ದೊಡ್ಡ ದೇಶವಾಗಿದೆ. ಒಟ್ಟು ಬಂಡವಾಳ ಹೂಡಿಕೆಯ ನೂರನೇ ಒಂದು ಭಾಗವನ್ನು ಸಾಮೂಹಿಕ ಕೃಷಿ ಕ್ಷೇತ್ರಗಳಲ್ಲಿ ಅತ್ಯುತ್ತಮ ತಂತ್ರ ಜ್ಞಾನವನ್ನು ಬಳಸಿ ಅವುಗಳನ್ನು ಬಲಗೊಳಿಸಲು ಉಪಯೋಗಿಸಲಾಗಿದೆ.

ಬಂಡವಾಳ ಶಾಹಿ ಜಗತ್ತಿಗೆ ಇತಿಹಾಸ ನೀಡುತ್ತಿರುವ ಸಾವಿನ ಸೂಚನೆಯೊಗಿದೆ

ಫ್ಯಾಕ್ಟರಿ ಕೆಲಸಗಾರರು ಮತ್ತು ಕಚೇರಿ ನೌಕರರ ಸರಾಸರಿ ಮಾಸಿಕ ಆದಾಯವು ಶೇಕಡ 13 ರಷ್ಟು ಏರಿದೆ. (1985 ರಲ್ಲಿ ಅದು 190 ರೊಬಲುಗಳು) ವೇತನ ವ್ಯವಸ್ಥೆಯಲ್ಲಿ ಕೈಗೊಂಡಿರುವ ಕೆಲವು ಮುಖ್ಯ ಕ್ರಮಗಳಿಂದಾಗಿ 20 ದಶಲಕ್ಷ ಜನತೆಯ ಆದಾಯದಲ್ಲಿ ಗಮನಾರ್ಹ ಹೆಚ್ಚಳವುಂಟಾಗಿದೆ. 550 ದಶಲಕ್ಷ ಚ. ಮೀಟರ್ ಪ್ರದೇಶದ ಹೊಸ ವಸತಿ ನಿರ್ಮಾಣ ಮಾಡಿದ್ದು ಇದು 50 ಮಿಲಿಯನ್ ಜನತೆಯ ವಸತಿ ಸೌಲಭ್ಯವನ್ನು ಸುಧಾರಿಸಿದೆ.

ಮಗುವನ್ನು ನೋಡಿಕೊಳ್ಳುವ ಸಲುವಾಗಿ ತಾಯಂದಿರಿಗೆ ಒಂದು ವರ್ಷದ ವೇತನ ಸಹಿತ ರಜೆ; ಶಿಶು ಜನನ ಸಮಯದಲ್ಲಿ ಕೊಡಲಾಗುತ್ತಿದ್ದ ಗ್ರಾಂಟುಗಳ ಮೊತ್ತದಲ್ಲಿ ಏರಿಕೆ; ಶಾಲಾ ಪೂರ್ವ ಮಕ್ಕಳ ಆಹಾರಕ್ಕಾಗಿ ಮಾಡುತ್ತಿದ್ದ ಖರ್ಚಿನಲ್ಲಿ ಏರಿಕೆ; ವಿದ್ಯಾರ್ಥಿಗಳಿಗೆ ಉಚಿತ ಪಠ್ಯ ಪುಸ್ತಕಗಳ ಹಂಚಿಕೆ. ಇವು ಸರ್ಕಾರದ ಇನ್ನಿತರ ಸಾಧನೆಗಳು.

ಬಂಡವಾಳಶಾಹೀ ಜಗತ್ತಿನ ಜನರ ಜೀವನ ಮಟ್ಟ ಶೋಚನೀಯವಾಗಿ ಕುಸಿಯುತ್ತಿರುವ ಬಂಡವಾಳಶಾಹೀ ಸರ್ಕಾರಗಳು ಕಾರ್ಯಗಳಿಗಾಗಿ

ಮಾಡುತ್ತಿರುವ ವೆಚ್ಚದಲ್ಲಿ ತೀವ್ರವಾದ ಕಡಿತವುಂಟುಮಾಡುತ್ತಿರುವ ಇದೇ ಸಂದರ್ಭದಲ್ಲೇ ಸಮಾಜವಾದೀ ಜಗತ್ತು ಅದ್ಭುತ ಪ್ರಗತಿಯನ್ನು ಸಾಧಿಸುತ್ತಿದೆ ಸಾಮ್ರಾಜ್ಯಶಾಹಿಗಳ ಆಕ್ರಮಕಾರೀ ಸಿದ್ಧತೆಗಳನ್ನು ಸಮರ್ಥವಾಗಿ ಎದುರಿಸುವ ಉದ್ದೇಶದಿಂದ ಅಪಾರ ಹಣವನ್ನು ಮಿಲಿಟರಿ ಸಿದ್ಧತೆಗಾಗಿ ವ್ಯಯಿಸ ಬೇಕಾಗಿರುವ ಸಮಯದಲ್ಲೇ ಸೋವಿಯೆತ್ ದೇಶವು ಮಹತ್ವಪೂರ್ಣ ಪ್ರಗತಿಯನ್ನು ಸಾಧಿಸಿರುವುದು ಗಮನಾರ್ಹವಲ್ಲವೇ ?

ಸೋವಿಯೆತ್ ಒಕ್ಕೂಟವನ್ನು ಆಳುವವರು

ಕಾರ್ಮಿಕರ ಸಂಖ್ಯೆ 44.4%, ಸಾಮೂಹಿಕ ರೈತರು 24.8./.

ಹಾಗೂ ಕಚೇರಿ ನೌಕರರು 30 8./.

ಕಮ್ಯುನಿಷ್ಟ್ ಪಕ್ಷದ ಸದಸ್ಯರು 42.8 /. ಆದರೆ ಸೋವಿಯತ್‌ಗಳಲ್ಲಿ 57.2 /.

ಮಹಿಳಾ ಪ್ರತಿನಿಧಿಗಳ ಸಂಖ್ಯೆ 50.3./.

ಮೂವತ್ತು ವರ್ಷಕಿಂತ ಪಡಿಮೆ ವಯಸ್ಸಿನವರು 34.2./.

ಸೋವಿಯೆತ್ ಸಮಾಜದಲ್ಲಿ ಮಹಿಳೆಯರು

ಸಮಾಜವಾದೀ ವ್ಯವಸ್ಥೆಯಲ್ಲಿ ಮಹಿಳೆಯರ ಸಾಮಾಜಿಕ–ರಾಜಕೀಯ ಸ್ಥಾನಮಾನ ಕೇವಲ ಕಾಗದದಲ್ಲೇ ಉಳಿದಿಲ್ಲ.

ಸೋವಿಯೆತ್ ಒಕ್ಕೂಟದ ಅತ್ಯುಚ್ಚ ರಾಜಕೀಯ ಸಂಸ್ಥೆಯಲ್ಲಿ ಮೂರರಲ್ಲಿ ಒಬ್ಬರು ಮಹಿಳೆಯರಾದರೆ ಸ್ಥಳೀಯ ಪ್ರಭುತ್ವದ ಅಂಗಗಳಲ್ಲಿ ಅರ್ಧದಷ್ಟಿದ್ದಾರೆ. ನ್ಯಾಯಾಂಗದಲ್ಲಿ ಜನತಾ ನ್ಯಾಯಾಧೀಶರಲ್ಲಿ 36.8ಶೇ ಮಹಿಳೆಯರು. ವೈಜ್ಞಾನಿಕ ಚಟುವಟಿಕೆಗಳಲ್ಲಿ ತೊಡಗಿರುವವರಲ್ಲಿ ಶೇ 40 ರಷ್ಟು ಮಹಿಳೆಯರು. ಸಮಾನ ಕೆಲಸಕ್ಕೆ ಸಮಾನ ವೇತನ ಮಹಿಳೆಯರಿಗೆ ದೊರೆಯುತ್ತಿದೆ ಮಾತ್ರವಲ್ಲ, ಮಕ್ಕಳಿರುವ ಮಹಿಳೆಯರ ಕೆಲಸದ ಅವಧಿಯನ್ನು ತಮಗೆ ಅನುಕೂಲವಾಗುವಂತೆ ವ್ಯವಸ್ಥೆಯ ಮಾಡಿಕೊಳ್ಳಲು ಅವಕಾಶವಿದೆ.

ಬಂಡವಾಳಶಾಹಿ ಜಗತ್ತಿನಲ್ಲಿ

ಬಂಡವಾಳಶಾಹಿ ಜಗತ್ತಿನ ಅತ್ಯಂತ ಮುಂದುವರಿದ ದೇಶ ಅಮೇರಿಕಾದಲ್ಲಿ ಸ್ತ್ರೀಯರ ಸ್ಥಾನ–ಮಾನಗಳೇನು? ಪ್ರತಿನಿಧಿ ಸಭೆಯಲ್ಲಿ ಮಹಿಳೆಯರ ಸಂಖ್ಯೆ ಶೇ5 ಆದರೆ ಸೆನೆಟ್‌ನಲ್ಲಿ ಕೇವಲ ಶೇ 2 ರಾಜ್ಯಗಳ ಶಾಸಕಾಂಗದಲ್ಲಿ ಶೇ12 ವೈಜ್ಞಾನಿಕ ಚಟುವಟಿಕೆಗಳಲ್ಲಿ ತೊಡಗಿರುವವರ ಸಂಖ್ಯೆ ಕೇವಲ ಶೇ9.2 ದುಡಿಯುವ ಅಮೇರಿಕನ್ ಮಹಿಳೆಯ [illegible] ವೇತನ ಗಂಡಸರ ಸರಾಸರಿಯ ಶೇ60 ಮಾತ್ರ. ಕೆಲಸದಿಂದ ತೆಗೆಯುವಾಗ ಮೊದಲು ತೆಗೆಯುವುದು ಮಹಿಳೆಯರನ್ನು ಅವರಿಗೆ ಸಿಗುವ ಅನಾರೋಗ್ಯ ಭತ್ಯೆಯೂ ಗಂಡಸರಿಗಿಂತ ಕಡಿಮೆ.

ಮೈಸೂರು :

ಬೀಡಿ ಕಾರ್ಮಿಕರ ಸಮ್ಮೇಳನ

ಮೈಸೂರು ಜಿಲ್ಲಾ ಬೀಡಿ ಕಾರ್ಮಿಕರ ಎರಡನೆಯ ಸಮ್ಮೇಳನವು ಕಾ॥ ಎಂ. ಎಸ್. ಉಗ್ರಪ್ಪನವರ ಅಧ್ಯಕ್ಷತೆಯಲ್ಲಿ ಅಕ್ಟೋಬರ 16 ರಂದು ನಡೆಯಿತು ಚಾಮರಾಜನಗರ, ಗುಂಡ್ಲುಪೇಟೆಗಳಿಂದ ಪ್ರತಿನಿಧಿಗಳು ಬಂದಿದ್ದರು.

ಸಮ್ಮೇಳನವನ್ನು ರಾಜ್ಯ ಬೀಡಿ ಕಾರ್ಮಿಕರ ಫೇಡರೇಶನ್ನಿನ ಪ್ರಧಾನ ಕಾರ್ಯದರ್ಶಿ ಕಾ| ಮಹಮುದ್ ದಸ್ತಗಿರ್‌ರವರು ಉದ್ಘಾಟಿಸಿದರು. ರಾಜ್ಯದಲ್ಲಿರುವ ಎಂಟು ಲಕ್ಷ ಬೀಡಿ ಕಾರ್ಮಿಕರು ತಮ್ಮ ಹಕ್ಕುಗಳ ರಕ್ಷಣೆಗಾಗಿ, ಮಾಲಕರ ಶೋಷಣೆಯ ವಿರುದ್ಧ ಸಂಘಟಿತರಾಗಬೇಕೆಂದು ಕರೆ ನೀಡಿದರು.

ಫೇಡರೇಶನ್ನಿನ ರಾಜ್ಯ ಅಧ್ಯಕ್ಷ ಕಾ| ಎಸ್, ಸೂರ್ಯನಾರಾಯಣ ರಾವ್ ಅವರು ಮಾತನಾಡುತ್ತಾ ದುಡಿಯುವ ಜನರೆಲ್ಲರೂ ಜಾತಿ ಮತ ಭೇದ ಮರೆತು ತಮ್ಮ ಬೇಡಿಕೆಗಳಿಗಾಗಿ ಹೋರಾಡಬೇಕೆಂದು ಕರೆಯಿತ್ತರು.

ಕನಿಷ್ಠ ಕೂಲಿಯನ್ನು ರೂ. 11-50ಕ್ಕೆ ಇಳಿಸಿರುವ ಸರ್ಕಾರದ ಕ್ರಮವನ್ನು ಖಂಡಿಸಿದ ಸಮ್ಮೇಳನವು ಸಾವಿರ ಬೀಡಿ ಕಟ್ಟಲು 15 ರೂ ಕನಿಷ್ಠ ಕೂಲಿ ನಿಗದಿ ಮಾಡಬೇಕೆಂದು ಒತ್ತಾಯಿಸಿತು.

ಎಸ್. ಎಫ್. ಐ ನ ರಾಜ್ಯ ಅಧ್ಯಕ್ಷರಾದ ಕಾ| ಆರ್. ಜಯಕುಮಾರ್ ಡಿ. ವೈ. ಎಫ್. ಐ. ನ ಮೈಸೂರು ಜಿಲ್ಲಾ ಕಾರ್ಯದರ್ಶಿ ಕಾ॥ ಬಿ. ಜಯರಾಂರವರು ಮಾತನಾಡಿ ಬೀಡಿ ಕಾರ್ಮಿಕರ ಹೋರಾಟಕ್ಕೆ ಬೆಂಬಲ ಸೂಚಿಸಿದರು.

ಮಂಗಳೂರಿನಲ್ಲಿ ನವೆಂಬರ್ 22-24ರವರೆಗೆ ನಡೆಯುವ ಬೀಡಿ ಕಾರ್ಮಿಕರ ರಾಜ್ಯ ಸಮ್ಮೇಳನಕ್ಕೆ 10 ಮಂದಿ ಪ್ರತಿನಿಧಿಗಳನ್ನು ಸಮ್ಮೇಳನವು ಆಯ್ಕೆ ಮಾಡಿತು.

ಭ್ರಷ್ಟಾಚಾರಕ್ಕೆ ಡಿ ವೈ ಎಫ್ ಐ ಪ್ರತಿಭಟನೆ

ಸ್ವಉದ್ಯೋಗ ಯೋಜನೆಯನ್ವಯ ದ. ಕನ್ನಡ ಜಿಲ್ಲೆಯಲ್ಲಿ ನಿರುದ್ಯೋಗಿಗಳಿಗೆ ಸ್ವಉದ್ಯೋಗ ನೀಡುವಲ್ಲಿ ಕಳೆದ ವರ್ಷ ಜಿಲ್ಲಾ ಕೈಗಾರಿಕಾ ಕೇಂದ್ರ (D.I.C.) ದಲ್ಲಿ ವ್ಯಾಪಕ ರೀತಿಯ ಭ್ರಷ್ಟಾಚಾರ, ಸ್ವಜನ ಪಕ್ಷಪಾತ ನಡೆದಿದ್ದು, ಪ್ರಸ್ತುತ ವರ್ಷದಲ್ಲೂ ಇದೇ ನೀತಿಯನ್ನು ಮುಂದುವರೆಸಿಕೊಂಡು ಹೋದಲ್ಲಿ ಚಳುವಳಿ ಹೂಡಬೇಕಾಗುತ್ತದೆಂದು ಡಿ. ವೈ. ಎಫ್.ಐ. ನ ದ. ಕನ್ನಡ ಜಿಲ್ಲಾ ಸಮಿತಿ ಎಚ್ಚರಿಕೆ ನೀಡಿದೆ.

ದ. ಕನ್ನಡದ ಕರಾವಳಿಯಲ್ಲಿ ಹೂಳೆತ್ತದೇ ಇರುವುದರಿಂದ ಹಲವಾರು ಲಾಂಚುಗಳು ನಾಶವಾಗಿದ್ದು ಅನೇಕ ಮಂದಿಗೆ ಪ್ರಾಣಾಪಾಯವಾಗಿ ಮೀನುಗಾರಿಕೆ ಉದ್ಯಮಕ್ಕೆ ಅಪಾಯ ಒದಗಿರುವುದರಿಂದ ಈ ಕೂಡಲೇ ಹೂಳೆತ್ತುವ ಕಾರ್ಯವನ್ನು ಆರಂಭಿಸಬೇಕೆಂದು ಇತ್ತೀಚೆಗೆ ನಡೆದ DYFI ನ ಜಿಲ್ಲಾ ಸಮಿತಿ ಸಭೆ ಸರ್ಕಾರವನ್ನು ಒತ್ತಾಯಿಸಿದೆ.

ಸರ್ಕಾರೀ ಕಚೇರಿಗಳನ್ನು ಸಂಪರ್ಕಿಸುವ ಸಾರ್ವಜನಿಕರಿಂದ ಸಣ್ಣ ಉಳಿತಾಯದ ಹೆಸರಿನಲ್ಲಿ ಕಡ್ಡಾಯವಾಗಿ ಹಣ ಸಂಗ್ರಹಿಸುವ ಪ್ರಕರಣಗಳು ವರದಿಯಾಗಿದ್ದು ಇದನ್ನು ಸಭೆ ಖಂಡಿಸಿದೆ.

ನವೆಂಬರ್ 3ಕ್ಕೆ ಡಿ.ವೈ.ಎಫ್.ಐ. ಅಸ್ತಿತ್ವಕ್ಕೆ ಒಂದು 6 ವರ್ಷ ಆಗಲಿದ್ದು, ಆ ದಿನವನ್ನು ದೇಶಾದ್ಯಂತ 'ಸ್ಥಾಪನಾ ದಿನಾಚರಣೆ'ಯನ್ನಾಗಿ ಆಚರಿಸಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದೆಂದೂ ಪ್ರಕಟನೆ ತಿಳಿಸಿದೆ.

ಇತ್ತೀಚೆಗೆ ನಿಧನರಾದ ಕನ್ನಡದ ಖ್ಯಾತ ಸಾಹಿತಿ ವಿಶುಕುಮಾರ್‌ರವರಿಗೆ ಸಭೆ ಶ್ರದ್ಧಾಂಜಲಿ ಅರ್ಪಿಸಿದೆ.

ಐಕ್ಯರಂಗಕ್ಕೆ

ಚಂದಾದಾರರಾಗಿರಿ

ಯುವಜನರ ಸಮಾವೇಶ

ಡಿ.ವೈ.ಎಫ್.ಐ ನ ಕೋಲಾರ ಜಿಲ್ಲಾ ಸಮಿತಿಯ ಆಶ್ರಯದಲ್ಲಿ ಅಕ್ಟೋಬರ್ 5ರಂದು ಡಿ.ವೈ ಎಫ್.ಐ ಕಾರ್ಯಕರ್ತರ ಸಮಾವೇಶ ಚಿಂತಾಮಣಿಯಲ್ಲಿ ನಡೆಯಿತು.

ಸಮಾವೇಶದಲ್ಲಿ ಡಿ.ವೈ.ಎಫ್.ಐ.ನ ಅಖಿಲ ಭಾರತ ಜಂಟಿ ಕಾರ್ಯದರ್ಶಿ, ಹಾಗೂ ರಾಜ್ಯಸಭಾ ಸದಸ್ಯರಾದ ಕಾ॥ ಎಂ.ಎ ಬೇಬಿ,ಡಿ ವೈ ಎಫ್.ಐ.ನ ರಾಜ್ಯ ಕಾರ್ಯದರ್ಶಿ ಕಾ. ಎಸ್. ಶಿವರಾಂ ಮತ್ತು ಕಾ॥ ಜಿ. ವಿ ಶ್ರೀರಾಮರೆಡ್ಡಿ ಮಾತನಾಡಿದರು. ಡಿ.ವೈ ಎಫ್.ಐ. ನ ಜಿಲ್ಲಾ ಸಂಚಾಲಕ ಕಾ॥ ಕೆ. ವಿ. ಸತ್ಯನಾರಾಯಣ. ಸಭೆಯ ಅಧ್ಯಕ್ಷತೆ ವಹಿಸಿದ್ದರು. ಅದೇ ದಿನ ಸಂಜೆ "ರಾಷ್ಟ್ರೀಯ ಸಮಗ್ರತೆ ಮತ್ತು ಐಕ್ಯತೆ" ಎಂಬ ವಿಷಯದ ಬಗ್ಗೆ ವಿಚಾರ ಸಂಕೀರ್ಣ ನಡೆಯಿತು. ಸಂಕಿರಣದಲ್ಲಿ ಕಾ॥ ಎಂ. ಎ. ಬೇಬಿ, ಕಾ. ಜಿ. ವಿ ಶ್ರೀರಾಮರೆಡ್ಡಿ, ಡಾ. ರಾಮಚಂದ್ರ ಗೌಡ, ಪ್ರೊಫೆಸರ್ ನಾಗರಾಜ್, ಶ್ರೀ ಎಂ. ಆರ್. ನರಸಿಂಹ ಪ್ರಸಾದ್, ಶ್ರೀಮತಿ ಉತ್ತನೂರು ರಾಜಮ್ಮ ಶ್ರೀ ಕೆ. ವಿ. ವೆಂಕಟರಾಯಪ್ಪ ಶ್ರೀ ಪಾಪಿರೆಡ್ಡಿ ಶ್ರೀ ಟಿ. ಶ್ರೀನಿವಾಸರಾವ್ ಮುಂತಾದವರು ಭಾಗವಹಿಸಿದ್ದರು.

ಡಿ. ವೈ. ಎಫ್. ಐ. ಸಭೆ

ಮಲಪನ ಗುಡಿಯ ಡಿ.ವೈ ಎಫ್.ಐ ಸಭೆಯು ಅಕ್ಟೋಬರ್ 15 ರಂದು ಕಾ| ಎಸ್. ವೈ. ಗುರುಶಾಂತ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾ॥ ಪರಶುರಾಮ್ ಕಲಾಲ್ ಸಭೆಯನ್ನು ಸ್ವಾಗತಿಸಿದರು, ಕಾ. ಸಿದ್ಧಲಿಂಗಪ್ಪ ವರದಿಯನ್ನು ಮಂಡಿಸಿದರು.

ಸಭೆಯಲ್ಲಿ ಯುವಜನರ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು. ಸಭೆಯಲ್ಲಿ 15 ಸದಸ್ಯರ ನೂತನ ಸಮಿತಿಯನ್ನು ರಚಿಸಲಾಯಿತು. ಅಧ್ಯಕ್ಷರಾಗಿ ಕಾ. ಲಾಲ್ ಅಹ್ಮದ್ ಉಪಾಧ್ಯಕ್ಷರಾಗಿ ಕಾ. ವಿ. ನಾಗರಾಜ್, ಬಿ. ಬಸವರಾಜ್, ಕಾರ್ಯದರ್ಶಿಯಾಗಿ ಕಾ॥ ಕೆ. ತಾಯಪ್ಪ ಸಹ ಕಾರ್ಯದರ್ಶಿಯಾಗಿ ಕಾ. ಪರುಶರಾಮ್ ಕಲಾಲ್ ಹಾಗೂ ಖಜಾಂಚಿಯಾಗಿ ಕಾ. ಸಿದ್ಧಲಿಂಗಪ್ಪ ಆಯ್ಕೆಯಾಗಿದ್ದಾರೆ.

ಪಂಜಾಬೀ ಜನತೆಗೆ ಪಾಲಿಟ್ ಬ್ಯೂರೋ ಕರೆ

ಪಂಜಾಬಿನಲ್ಲಿ ಕಾನೂನು ಮತ್ತು ವ್ಯವಸ್ಥೆಯ ಪರಿಸ್ಥಿತಿ ಸುಧಾರಿಸುತ್ತಿದೆ, ತೀವ್ರಗಾಮಿಗಳು ಒಬ್ಬೊಬ್ಬರಾಗಿ ಸೆರೆಯಾಗುತ್ತಿದ್ದಾರೆ. ಎಂದು ಪಂಜಾಬ್ ಸರ್ಕಾರ ಹಾಗೂ ಕೇಂದ್ರ ಸರ್ಕಾರ ಹೇಳುತ್ತಿರುವಂತೆಯೇ ನವಂಬರ್ 1 ರಂದು ಸ್ವರ್ಣಮಂದಿರದಲ್ಲಿ "ಸರ್ಬತ್ ಖಾಲ್ಸಾ" ನಡೆಸುವುದಕ್ಕೆ ಪೂರ್ವಭಾವಿಯಾಗಿಯೇ ಎಂಬಂತೆ ಕೇವಲ ಒಂದೇ ವಾರದಲ್ಲಿ 35 ಮಂದಿ ಅಮಾಯಕ ಜನರನ್ನು ಖಾಲಿಸ್ತಾನೀ ತೀವ್ರಗಾಮಿಗಳು ಕೊಂದಿದ್ದಾರೆ.

ಸಾಮ್ರಾಜ್ಯಶಾಹಿಗಳ ಆದೇಶದಂತೆ ದೇಶವನ್ನು ಅಸ್ಥಿರಗೊಳಿಸಲು ಪಾಕಿಸ್ತಾನದಲ್ಲಿ ತರಬೇತಿ ಪಡೆದು ಬರುವ ತೀವ್ರಗಾಮಿಗಳ ಇಂತಹ ಚಟುವಟಿಕೆಗಳು ಹೆಚ್ಚುತ್ತಿರುವ ಬಗ್ಗೆ ಸಿ.ಪಿ.ಐ (ಎಂ)ನ ಪಾಲಿಟ್‌ಬ್ಯೂರೋ ತನ್ನ ತೀವ್ರ ಆತಂಕವನ್ನು ವ್ಯಕ್ತಪಡಿಸಿದೆ. ಪಂಥದ ಐಕ್ಯತೆಯ ಬಗ್ಗೆ ಸದಾ ಮಾತನಾಡುವ ಸಿಖ್ಖ್ ಪ್ರಮುಖ ಗುರುಗಳು ಸಿಖ್ಖರು ಮತ್ತು ಹಿಂದುಗಳ ನಡುವೆ ಕಂದರ ವುಂಟುಮಾಡಲು ತೀವ್ರಗಾಮಿಗಳು ಗುರುದ್ವಾರಗಳನ್ನು ಬಳಸುವುದನ್ನು ಖಂಡಿಸಲು ಹಿಂಜರಿಯುತ್ತಿದ್ದುದರ ಫಲವಾಗಿ ಸ್ವರ್ಣಮಂದಿರದಲ್ಲಿ ಇಂದಿರಾಗಾಂಧಿಯವರ ಹಾಗೂ ಸ್ಯಾಂತ ಲೋಂಗೋವಾಲರ ಹಂತಕರ ಸ್ಮರಣಾರ್ಥ ಸಭೆ 'ಸರ್ಬತ್ ಖಾಲ್ಸಾ' ನಡೆಸುವುದಾಗಿ ಬಹಿರಂಗವಾಗಿ ಘೋಷಿಸಲು ತೀವ್ರಗಾಮಿಗಳಿಗೆ ಸಾಧ್ಯವಾಗಿದೆ. ಮತ್ತು ಪಂಜಾಬ್ ಒಪ್ಪಂದದ ಪ್ರಕಾರ ಪಂಜಾಬಿಗಳ ಪ್ರಜಾಸತ್ತಾತ್ಮಕ ಬೇಡಿಕೆಗಳನ್ನು ಈಡೇರಿಸುವಲ್ಲಿ ಕೇಂದ್ರ ಸರ್ಕಾರದ ವಿಫಲತೆ ಕೂಡಾ ಬೆಂಕಿಗೆ ತುಪ್ಪ ಸುರಿಯುತ್ತಿದೆ ಎಂದು ಗಮನಿಸಿರುವ ಪಾಲಿಟ್‌ಬ್ಯೂರೋ ಹಿಂದಿನ ಅನುಭವಗಳಿಂದ ಸರಿಯಾದ ಪಾಠ ಕಲಿತು ದೇಶವಿರೋಧಿ ಚಟುವಟಿಕೆಗಳ ವಿರುದ್ಧ ದೃಢ ನಿಲುವು ತಳೆಯಬೇಕೆಂದು ಅಕಾಲಿದಳಕ್ಕೆ 'ಪಂಜಾಬ್ ಸರ್ಕಾರಕ್ಕೆ ಹಾಗೂ ಶಿರೋಮಣಿ ಗುರುದ್ವಾರ ಪ್ರಬಂಧಕ ಸಮಿತಿಯನ್ನು ಕೇಳಿಕೊಂಡಿದೆ.

ಗದರ್ ಪಾರ್ಟಿ, ಜಾಲಿಯನಾವಾಲಾಬಾಗ್, ಬಬ್ಬರ್ ಅಕಾಲಿ, ಅಕಾಲಿ ಚಳುವಳಿ, ಭಗತ್‌ಸಿಂಗ್ ಹಾಗೂ ಆತನ ಸಹಯೋಗಿಗಳು ಹಾಗೂ ಕಾರ್ಮಿಕ ಮತ್ತು ರೈತಾಪಿ ವರ್ಗಗಳ ಅಸಂಖ್ಯಾತ ಹುತಾತ್ಮರ ಪರಂಪರೆಯನ್ನು ನೆನಪಿಸಿಕೊಂಡು ಪಂಜಾಬೀ ಜನತೆಯು ಐಕ್ಯತೆಯನ್ನು ಹಾಗೂ ದೇಶದ ಸ್ವಾತಂತ್ರ್ಯವನ್ನು ರಕ್ಷಿಸುವ ಹೋರಾಟದಲ್ಲಿ ಸಕ್ರಿಯ ಭಾಗವಹಿಸಬೇಕೆಂದು ಪಂಜಾಬಿನ ಜನತೆಗೆ ಪಾಲಿಟ್‌ಬ್ಯೂರೋ ಮನವಿ ಮಾಡಿಕೊಂಡಿದೆ.

ಪಶ್ಚಿಮ ಬಂಗಾಳ :

ಮತ್ತೊಮ್ಮೆ ತೀವ್ರ ಪ್ರವಾಹ : ಸುಸಂಘಟಿತ ಪರಿಹಾರ

1978ರ ಪ್ರವಾಹದ ನಂತರ ಎಂಟು ವರ್ಷಗಳಲ್ಲಿ ಮತ್ತೊಮ್ಮೆ ಈ ಬಾರಿ ಪಶ್ಚಿಮ ಬಂಗಾಳ ಭಾರೀ ಮಳೆ ಕಂಡಿದೆ ಪರಿಣಾಮವಾಗಿ ರಾಜ್ಯ ಮತ್ತೊಮ್ಮೆ ತೀವ್ರ ಪ್ರವಾಹವನ್ನು ಎದುರಿಸಬೇಕಾಗಿ ಬಂದಿದೆ. ಆದರೆ ಎಡರಂಗ ಸರ್ಕಾರ ತುರ್ತು ಪರಿಹಾರ ಕ್ರಮಗಳು ಹಾಗೂ ಸಿ.ಪಿ.ಐ (ಎಂ) ಮತ್ತು ಎಡರಂಗದ ಕಾರ್ಯಕರ್ತರು ರಾತ್ರಿ-ಹಗಲೆನ್ನದೆ ಪರಿಹಾರ ಕಾರ್ಯಗಳಲ್ಲಿ ಧುಮುಕಿದ್ದರಿಂದ ಪ್ರಾಣಹಾನಿಯನ್ನು 29ಕ್ಕೇ ನಿಲ್ಲಿಸಲು ಸಾಧ್ಯವಾಯಿತು. ಎರಡು ಲಕ್ಷಕ್ಕೂ ಹೆಚ್ಚು ಮನೆಗಳು ಪ್ರವಾಹದಲ್ಲಿ ಕುಸಿದುಬಿದ್ದವು. ರಸ್ತೆ, ಕಟ್ಟಡಗಳು, ನೀರು ಪೂರೈಕೆ ವ್ಯವಸ್ಥೆ, ವಿದ್ಯುಚ್ಛಕ್ತಿ ಹಾಗೂ ಟೆಲಿಫೋನ್ ಸಂಪರ್ಕಗಳಿಗೆ ತೀವ್ರ ಹಾನಿಯುಂಟಾಗಿದೆ. ಸುಮಾರು 8.5 ಲಕ್ಷ ಹೆಕ್ಟೇರು ಜಮೀನು ಜಲಾವೃತ್ತವಾದುದರಿಂದ 110 ಕೋಟಿ ರೂ.ಗಳ ನಷ್ಟವಾಗಿದೆ.

ಕೇರಳದಲ್ಲಿ ಸಂಯುಕ್ತ ಪ್ರಜಾಪ್ರಭುತ್ವರಂಗ (ಯು.ಡಿ.ಎಫ್.) 53 ತಿಂಗಳ ಆಳ್ವಿಕೆಯಲ್ಲಿ ಸರಾಸರಿ ತಿಂಗಳಿಗೆ 40 ಕೊಲೆಗಳು ನಡೆದಿವೆ ಎಂದು ಪಿ.ಟಿ.ಐ. ವಾರ್ತಾ ಸಂಸ್ಥೆ ಅಕ್ಟೋಬರ್ 27ರಂದು ತಿಳಿಸಿದೆ.

ರಾಜ್ಯ ಸರ್ಕಾರ ಎಷ್ಟು ಸಾಧ್ಯವೋ ಅಷ್ಟು ವ್ಯಾಪಕ ಪ್ರಮಾಣದಲ್ಲಿ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ನಿರ್ವಸಿತರಿಗೆ ತಾತ್ಕಾಲಿಕ ವಸತಿ, ಆಹಾರ ಪೂರೈಕೆ, ಸಾಂಕ್ರಾಮಿಕ ರೋಗಗಳ

(7ನೇ ಪುಟ ನೋಡಿ)

ಅಂತರಾಷ್ಟ್ರೀಯ

ದ. ಆಫ್ರಿಕಾದೊಂದಿಗಿನ ಎಲ್ಲಾ ಸಂಬಂಧ ಕಡಿದುಕೊಳ್ಳುವಂತೆ ಸಂ. ರಾ. ಸಂಘದ ಆದೇಶ

ವರ್ಣದ್ವೇಷ ನೀತಿಯನ್ನು ಮುಂದುವರಿಸಿಕೊಂಡು ಬರುತ್ತಿರುವ ದ. ಆಫ್ರಿಕಾದ ಜೊತೆಗಿನ ಎಲ್ಲ ರಾಜಕೀಯ, ಆರ್ಥಿಕ, ರಾಜ್ಯತಾಂತ್ರಿಕ ಹಾಗೂ ಸೈನಿಕ ಸಂಬಂಧಗಳನ್ನು ತಕ್ಷಣ ಕಡಿದುಕೊಳ್ಳುವಂತೆ ಸಂಯುಕ್ತ ರಾಷ್ಟ್ರ ಸಂಘದ ಜನರಲ್ ಅಸೆಂಬ್ಲಿ ತನ್ನ ಎಲ್ಲ ಸದಸ್ಯ ರಾಷ್ಟ್ರಗಳಿಗೂ ಕರೆ ನೀಡಿದೆ. ತಾ. 31-10-1989 ರಂದು ನಡೆದ ಸಂ. ರಾ. ಸಂಘದ ಮಹಾಧಿವೇಶನದಲ್ಲಿ ನಮೀಬಿಯಾವನ್ನು ಆಕ್ರಮಿಸಿಕೊಂಡಿರುವ ದ. ಆಫ್ರಿಕಾ ಸರಕಾರವನ್ನು ಖಂಡಿಸಲಾಗಿದೆ. ನಮೀಬಿಯಾದ ಅಪಾರ ಸಂಪನ್ಮೂಲಗಳನ್ನು ಕಾನೂನು ಬಾಹಿರವಾಗಿ ಲೂಟಿ ಮಾಡುತ್ತಿರುವ ದ. ಆಫ್ರಿಕಾ ಸರಕಾರ ಮುಂದೊಂದು ದಿನ ನಮೀಬಿಯಾ ಸ್ವತಂತ್ರವಾಗಿ ಅಲ್ಲ ಕಾನೂನು ಬದ್ಧ ಸರಕಾರ ರಚನೆಯಾದಾಗ ಅದಕ್ಕೆ ದಂಡ ತೆರಬೇಕಾಗುತ್ತದೆಂದೂ ವಿಶ್ವ ಸಂಸ್ಥೆಯ ಅಧಿವೇಶನ ನಿರ್ಣಯದಲ್ಲಿ ಎಚ್ಚರ ನೀಡಲಾಗಿದೆ. ವಿಶ್ವಸಂಸ್ಥೆಯ 159 ಸದಸ್ಯ ರಾಷ್ಟ್ರಗಳಲ್ಲಿ ಭಾರತವನ್ನೂ ಒಳಗೊಂಡಂತೆ 124 ರಾಷ್ಟ್ರಗಳು ಈ ನಿರ್ಣಯದ ಪರವಾಗಿ ಮತ ನೀಡಿದ್ದರೆ, ಅಮೇರಿಕಾ ಸಂಯುಕ್ತ ಸಂಸ್ಥಾನ, ಬ್ರಿಟನ್ ಮತ್ತು ಪ. ಜರ್ಮನಿ ಸೇರಿ ಹನ್ನೊಂದು ರಾಷ್ಟ್ರಗಳು ಎಂದಿನಂತೆ ಈ ನಿರ್ಣಯವನ್ನು ವಿರೋಧಿಸಿದ್ದವು. ಹದಿನೈದು ರಾಷ್ಟ್ರಗಳು ಮತದಾನದಲ್ಲಿ ಭಾಗವಹಿಸಿಲ್ಲ.

ವಿಶ್ವಸಂಸ್ಥೆಯ ಈ ಹಿಂದಿನ ನಿರ್ಣಯಗಳಿಗೆ ವಿರುದ್ಧವಾಗಿ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯು (IMF) ದಕ್ಷಿಣಾ ಆಫ್ರಿಕಾದೊಂದಿಗೆ ಹಣಕಾಸು ಒಪ್ಪಂದ ಮಾಡಿಕೊಂಡಿರುವುದನ್ನೂ ವಿಶ್ವ ಸಂಸ್ಥೆ ಬಲವಾಗಿ ಖಂಡಿಸಿದೆ. ಅಂತರಾಷ್ಟ್ರೀಯ ಹಣಕಾಸು ಸಂಸ್ಥೆ ತನ್ನ ಈ ಒಪ್ಪಂದವನ್ನು ಕೂಡಲೇ ರದ್ದು ಪಡಿಸಬೇಕೆಂದು ಪ್ರತ್ಯೇಕ ನಿರ್ಣಯವೊಂದರಲ್ಲಿ ಆದೇಶಿಸಿದೆ.

ನಿಕಾರಾಗುವ ಸರಕಾರವನ್ನು ಉರುಳಿಸಲು ಅಮೇರಿಕ ನಡೆಸುತ್ತಿರುವ ಪಿತೂರಿಯ ವಿರುದ್ಧ ಜಾಗತಿಕ ನ್ಯಾಯಾಲಯ ನೀಡಿದ ತೀರ್ಪನ್ನು ಕುರಿತಂತೆ ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿ ಈ ವಾರ ಚರ್ಚಿಸಲಿದೆ. ಅಮೇರಿಕಾ ಸಂ. ಸಂ. ದ ಬಲವಾದ ವಿರೋಧವಿದ್ದರೂ ವಿಶ್ವ ಸಂಸ್ಥೆಯ ವಿಶೇಷ ಸಮಿತಿ ಈ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಲು ಶಿಫಾರಸು ಮಾಡಿದೆ.

ರಾಜತಾಂತ್ರಿಕರ ಗಡೀಪಾರು ವಿಶ್ವಸಂಸ್ಥೆಗೆ ಸೋವಿಯತ್ ಮನವಿ

ವಿಶ್ವಸಂಸ್ಥೆಯ ಕೇಂದ್ರ ಕಚೇರಿಯಲ್ಲಿರುವ ಸೋವಿಯತ್ ಒಕ್ಕೂಟದ ರಾಜತಾಂತ್ರಿಕರನ್ನು ಕುಂಟುನೆಪ ಒಡ್ಡಿ ಕಾನೂನು ಬಾಹಿರವಾಗಿ ಅಮೇರಿಕದಿಂದ ಗಡೀಪಾರು ಮಾಡುತ್ತಿರುವ ಅಮೇರಿಕಾ ಸಂಯುಕ್ತ ಸಂಸ್ಥಾನದ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸೋವಿಯತ್ ಸರಕಾರವು ವಿಶ್ವ ಸಂಸ್ಥೆಗೆ ಮನವಿ ಮಾಡಿಕೊಂಡಿದೆ. ರಾಜತಾಂತ್ರಿಕರನ್ನು ಗಡೀಪಾರು ಮಾಡುವ ಕಾರ್ಯ ಮಿತಿ ಮೀರುತ್ತಿದ್ದು ಅದಕ್ಕೆ ತಡೆಹಾಕಬೇಕಾದ ಅವಶ್ಯಕತೆಯಿದೆಯೆಂದೂ ಅಮೇರಿಕಾ ಸಂ. ಸಂಸ್ಥಾನವು ಇನ್ನು ಮುಂದೆ ಸೋವಿಯತ್ ರಾಜತಾಂತ್ರಿಕರನ್ನು ನ್ಯೂಯಾರ್ಕ್‌ನಿಂದ ಗಡೀಪಾರು ಮಾಡುವ ಕೃತ್ಯ ನಡೆಸಿದರೆ ಸೋವಿಯತ್ ಒಕ್ಕೂಟವು ವ್ಯಾಪಕ ಪ್ರತಿಕ್ರಮಗಳನ್ನು ಕೈಗೊಳ್ಳಬೇಕಾದೀತೆಂದೂ ಸೋವಿಯತ್ ಒಕ್ಕೂಟ ಎಚ್ಚರಿಕೆ ನೀಡಿದೆ.

ಅಮೇರಿಕವು ಕೈಗೊಂಡಿರುವ ಏಕಪಕ್ಷೀಯ ಕ್ರಮಗಳು ವಿಶ್ವಸಂಸ್ಥೆಯ ಕೇಂದ್ರ ಕಚೇರಿಗೆ ಕುರಿತಂತೆ ಮಾಡಿಕೊಳ್ಳಲಾಗಿದ್ದ ಒಪ್ಪಂದವನ್ನು ಉಲ್ಲಂಘಿಸಿದೆಯೆಂದೂ ವಿಶ್ವಸಂಸ್ಥೆಗೆ ಆತಿಥೇಯ ರಾಷ್ಟ್ರವಾಗಿರುವ ಅಮೇರಿಕವು ಸಂಯಮದಿಂದ ವರ್ತಿಸಿ ಒಪ್ಪಂದವನ್ನು ಗೌರವಿಸುವಂತೆ ವಿಶ್ವಸಂಸ್ಥೆ ಅದರ ಮೇಲೆ ಒತ್ತಾಯ ತರಬೇಕೆಂದೂ ಸೋವಿಯತ್ ಒಕ್ಕೂಟ ಕೇಳಿಕೊಂಡಿದೆ.

ಪಾಕಿಸ್ತಾನಿ ನೆಲೆಗಳ ಬಳಕೆಗೆ ವಿರೋಧ

ಪಾಕಿಸ್ತಾನದಲ್ಲಿರುವ ಸೈನಿಕ ನೆಲೆಗಳನ್ನು ಅಮೇರಿಕವು ಬಳಸಿಕೊಳ್ಳಲು ಅವಕಾಶ ಮಾಡಿ ಕೊಡುವುದನ್ನು ಪಾಕಿಸ್ತಾನದ ಪ್ರಮುಖ ವಿರೋಧ ಪಕ್ಷಗಳು ಖಂಡ ತುಂಡವಾಗಿ ವಿರೋಧಿಸಿವೆ. ಬೆನಜೀರ್ ಭುಟ್ಟೋ ಮತ್ತು ಏರ್‌ಮಾರ್ಷಲ್ ಅಸ್ಗರ್ ಖಾನ್ ಸಹಿತ ಅನೇಕ ಪ್ರಮುಖ ಪಾಕಿಸ್ಥಾನಿ ವಿರೋಧಿ ಪಕ್ಷಗಳ ಮುಖಂಡರು ಪಾಕಿಸ್ಥಾನಕ್ಕೆ 'ಅವಾಕ್' ವಿಮಾನಗಳನ್ನು ನೀಡಿರುವುದರ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ. ಮಿತಿಮೀರಿದಷ್ಟು ಮಿಲಿಟರಿ ಸರಕುಗಳನ್ನು ಪಾಕಿಸ್ಥಾನಕ್ಕೆ ನೀಡುವುದು ಅಪಾಯಕಾರಿ ಪರಿಣಾಮಗಳಿಗೆ ಎಡೆ ಮಾಡಿಕೊಡಬಹುದೆಂದೂ ಕು. ಭುಟ್ಟೋ ಹೇಳಿರುವುದು ಗಮನಾರ್ಹ.

(6ನೇ ಪುಟದಿಂದ)

ಹರಡದಂತೆ ಕ್ರಮಗಳಿಗಾಗಿ 10 ಕೋಟಿ ರೂ.ಗೂ ಹೆಚ್ಚು ಖರ್ಚು ಮಾಡಿದೆ. ಪಕ್ಷ ಹಾಗೂ ಸಾಮೂಹಿಕ ಸಂಘಟನೆಗಳ ಸದಸ್ಯರು, ಪಂಚಾಯತ್, ಮುನಿಸಿಪಾಲಿಟಿ ಹಾಗೂ ಅದರ ಸ್ಥಳೀಯ ಸಂಸ್ಥೆಗಳು ಪರಿಹಾರ ಕಾರ್ಯ ಸಾಂಗವಾಗಿ ಅಡೆ-ತಡೆಯಿಲ್ಲದಂತೆ ನಡೆಯುವಲ್ಲಿ ಪೂರ್ಣ ಸಹಕಾರ ನೀಡುತ್ತಿವೆ. ಮುಖ್ಯಮಂತ್ರಿ ಜ್ಯೋತಿ ಬಸು ಪ್ರವಾಹಪೀಡಿತ ಜಿಲ್ಲೆಗಳ ಪ್ರವಾಸ ಮಾಡಿ ಜನ ಸಾಮಾನ್ಯರನ್ನು ಭೇಟಿ ಮಾಡುತ್ತಾ ಜನತೆಯಲ್ಲಿ ಒಂದು ಭರವಸೆಯ ವಾತಾವರಣ ಮೂಡಿಸಿದ್ದಾರೆ

ಅತ್ತ ಮಿಡ್ನಾಪುರ ಜಿಲ್ಲೆಯ ಕೆಲವು ಪ್ರವಾಹ ಪೀಡಿತ ಪ್ರದೇಶಗಳ ಪ್ರವಾಸ ನಡೆಸಿ ಪ್ರಧಾನ ಮಂತ್ರಿಗಳು 15 ಕೋಟಿ ರೂ.ಗಳ 'ಉದಾರ' ನೆರವು ಘೋಷಿಸಿದರು. ಆದರೆ ಇದರಲ್ಲಿ ರಾಜೀವಗಾಂಧಿಯವರ ಉದಾರತೆಯೇನೂ ಇರಲಿಲ್ಲ; ವಾಸ್ತವವಾಗಿ ಎಂಟನೇ ಹಣಕಾಸಿನ ಆಯೋಗ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಅರ್ಧ-ಅರ್ಧಪಾಲು ವಹಿಸುವ ಆಧಾರದ ಮೇಲೆ ರೂ. 23.74 ಕೋಟಿ ರೂಗಳನ್ನು ಪ್ರತಿವರ್ಷ ಪ್ರಾಕೃತಿಕ ಸಂಕಷ್ಟಗಳಿಗಾಗಿ ಮೀಸಲಿಡಬೇಕೆಂದು ಹೇಳಿದ್ದು, ರಾಜ್ಯ ಸರ್ಕಾರ 11.87 ಕೋಟಿ ಖರ್ಚು ಮಾಡಲು ನಿರ್ಧರಿಸಿದ ಮೇಲೆ ಕೇಂದ್ರ ಸರ್ಕಾರ ತನ್ನ ಪಾಲಿನ 11.87 ಕೋಟಿ ರೂಗಳನ್ನು ಕೊಡದೆ ಬೇರೆ ದಾರಿಯಿರಲಿಲ್ಲ. ಈ ಮುಖ್ಯ ಸಂಗತಿಯನ್ನು ಬೇಕೆಂದೇ ಮುಚ್ಚಿಡಲಾಗಿದೆ.

"ತಾರಾ ಸಮರವೊಂದು ಕೇವಲು" - ಜಿಮ್ಮಿ ಕಾರ್ಟರ್

"ತಾರಾ ಸಮರ ಕಾರ್ಯಕ್ರಮವೊಂದು ತಪ್ಪುಸಿದ್ಧಾಂತ; ಅದೊಂದು ದುಂದುವೆಚ್ಚದ ಬಿಳಿಯಾನೆ ಮತ್ತು ಅದರಿಂದ ಅಮೇರಿಕಾ ಸಂಯುಕ್ತ ಸಂಸ್ಥಾನದ ಸಂರಕ್ಷಣೆ ಸಾಧ್ಯವೆನ್ನುವುದು ಬರೀ ಭ್ರಮೆ. ಒಟ್ಟಿನಲ್ಲಿ ತಾರಾಸಮರ ರೊನಾಲ್ಡ್ ರೀಗನ್ ಆಡಳಿತೆಯ ಕೇವಲು" -ಹೀಗೆಂದವರು ಬೇರಾರೂ ಅಲ್ಲ. ಸ್ವತಃ ಅಮೇರಿಕಾದ ಹಿಂದಿನ ಅಧ್ಯಕ್ಷ ಜಿಮ್ಮಿ ಕಾರ್ಟರ್ !

ಬಂಗ್ಲಾದೇಶಕ್ಕೆ ಇತ್ತೀಚೆಗೆ ಭೇಟಿಯಿತ್ತ ಕಾರ್ಟರ್ ಅವರು ಶಸ್ತ್ರಾಸ್ತ್ರ ನಿಯಂತ್ರಣದ ಕುರಿತು ಮತ್ತೊಂದು ಅರ್ಥಪೂರ್ಣ ಮಾತುಕತೆ ಪ್ರಾರಂಭಿಸಬೇಕೆಂದೂ ಬಾಹ್ಯಾಕಾಶದ ಬಳಕೆಯ ಕುರಿತು ಮತ್ತು ಶಸ್ತ್ರಾಸ್ತ್ರಗಳಲ್ಲಿ ಕಡಿತದ ಬಗ್ಗೆ ವಾಸ್ತವಿಕ ನಿಲುವು ಅಂಗೀಕರಿಸಬಹುದೆಂದೂ ಹೇಳಿದರಲ್ಲದೆ ನೂರಾರು ಮುಗ್ಧ ಜನರ ಸಾವು ನೋವಿಗೆ ಕಾರಣವಾದ ಲಿಬಿಯಾದ ಮೇಲಿನ ಬಾಂಬು ಧಾಳಿಯನ್ನು ಖಂಡಿಸಿದರು

ಜೆಕ್ ಕಮ್ಯುನಿಸ್ಟ್ ಪಕ್ಷ ಮತ್ತು ಸಿ.ಪಿ.ಐ. (ಎಂ) ಪರಸ್ಪರ ಸಹಕಾರಕ್ಕೆ ಒಪ್ಪಂದ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ಮತ್ತು ಝೆಕೊಸ್ಲೊವಾಕಿಯಾ ಕಮ್ಯುನಿಸ್ಟ್ ಪಕ್ಷಗಳು ಮಾರ್ಕ್ಸವಾದಿ-ಲೆನಿನ್‌ವಾದಿ ಸಿದ್ಧಾಂತ ಹಾಗೂ ಕಾರ್ಮಿಕವರ್ಗದ ಅಂತರಾಷ್ಟ್ರೀಯತೆಯ ತತ್ವಗಳಿಗನುಗುಣವಾಗಿ ವಿವಿಧ ಕ್ಷೇತ್ರಗಳಲ್ಲಿ ಅನುಭವದ ವಿನಿಮಯ ಮತ್ತು ಸಹಕಾರಗಳಿಗೆ ಉತ್ತೇಜನ ನೀಡುವ ಜಂಟಿ ಒಪ್ಪಂದಕ್ಕೆ ಸಹಿಹಾಕಿವೆ. ನಿಶ್ಶಸ್ತ್ರೀಕರಣಕ್ಕಾಗಿ, ವಿಶ್ವಶಾಂತಿ ಮತ್ತು ಸಾಮಾಜಿಕ ಪ್ರಗತಿಗಾಗಿ ಹಾಗೂ ಸಾಮ್ರಾಜ್ಯಶಾಹಿಯವಿರುದ್ಧ ನಡೆಸುವ ಸಾರ್ವತ್ರಿಕ ಹೋರಾಟಗಳಲ್ಲಿ ಎರಡೂ ಪಕ್ಷಗಳು ಪರಸ್ಪರ ಸಹಕರಿಸಿವೆ. ಈ ಒಪ್ಪಂದದಲ್ಲಿ ಈ ಕೆಳಗಿನ ನಿರ್ದಿಷ್ಟ ಕಾರ್ಯಕ್ರಮಗಳೂ ಒಳಗೊಂಡಿವೆ.

1. ಎರಡೂ ಪಕ್ಷಗಳು ತಮ್ಮ ಪಕ್ಷದ ಅತ್ಯುನ್ನತ ಮಟ್ಟದ ವೇದಿಕೆಯ ಸಭೆಗಳಲ್ಲಿ ಭಾಗವಹಿಸಲು ಪರಸ್ಪರರನ್ನು ಆಮಂತ್ರಿಸಲಿವೆ.

2. ಝೆಕೊಸ್ಲೊವಾಕಿಯಾ ಕಮ್ಯುನಿಸ್ಟ್‌ಪಕ್ಷದ ಕೇಂದ್ರ ಸಮಿತಿಯುಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ)ದ ಅಧ್ಯಯನ ತಂಡವೊಂದನ್ನು ಆಮಂತ್ರಿಸಲಿದೆ ಮತ್ತು ಅಂತೆಯೇ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ)ದ ಕೇಂದ್ರ ಸಮಿತಿ ಜೆಕ್ ಕಮ್ಯುನಿಸ್ಟ್ ಪಕ್ಷದ ಅಧ್ಯಯನ ತಂಡಕ್ಕೆ ಆಮಂತ್ರಣ ನೀಡಲಿದೆ.

3. ಪಕ್ಷದ ಪತ್ರಿಕೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪತ್ರಕರ್ತರನ್ನು ಎರಡೂ ಪಕ್ಷಗಳು ಪರಸ್ಪರ ಸಂದರ್ಶನಕ್ಕೆ ಅವಕಾಶ ನೀಡಲಿವೆ.

4. ಎರಡೂ ಪಕ್ಷಗಳ ಘೋಷಣೆಯನ್ನು ಮತ್ತು ಎರಡೂ ರಾಷ್ಟ್ರಗಳ ಜನ ಜೀವನವನ್ನು ಇನ್ನೂ ಚೆನ್ನಾಗಿ ತಿಳಿದುಕೊಳ್ಳುವ ಸಲುವಾಗಿ ಎರಡು ಪಕ್ಷಗಳೂ ತಮ್ಮ ಪತ್ರಿಕೆ ಹಾಗೂ ಪ್ರಕಟಣೆಗಳ ವಿನಿಮಯ ಇತ್ಯಾದಿಗಳು ಈ ಒಪ್ಪಂದದಲ್ಲಿ ಸೇರಿವೆ.

ಲಾವೋಸ್ ಅಧ್ಯಕ್ಷರ ನಿವೃತ್ತಿ

ಇಂಡೊ ಚೀನಾದ ಮಹಾನ್ ಕ್ರಾಂತಿಕಾರಿಗಳಲ್ಲೊಬ್ಬರಾದ, 'ಪಥೇಟ್ ಲಾವೋ' ಪಡೆಯ ನಾಯಕರಾಗಿದ್ದು 1974 ರಲ್ಲಿ ಲಾವೋಸ್‌ನ ವಿಮೋಚನೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದ ಲಾವೋಸ್ ಅಧ್ಯಕ್ಷ ರಾಜಕುಮಾರ ಸೂಫಾನೋವೊಂಗ್ ಅವರು ಅನಾರೋಗ್ಯದ ಕಾರಣಗಳಿಂದಾಗಿ ಅಧ್ಯಕ್ಷ ಪದವಿಯಿಂದ ನಿವೃತ್ತರಾಗಿದ್ದಾರೆ. ಈವರೆಗೆ ಉಪ ಪ್ರಧಾನಿಯಾಗಿದ್ದ ಕಾ. ಫೌಮಿ ವೊಂಗ್‌ವಿಚಿತ್ ಅವರನ್ನು ಕಾರ್ಯನಿರ್ವಾಹಕ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆಂದೂ ತಿಳಿದುಬಂದಿದೆ.

ಕೇಂದ್ರ ಸರಕಾರದ ಕಾರ್ಮಿಕ ವಿರೋಧಿ ನೀತಿಯ ವಿರುದ್ಧ

ರಾಜ್ಯಾದ್ಯಂತ ಪ್ರತಿಭಟನೆ

ಇಂಡಿಯನ್ ಟ್ರೇಡ್ ಯೂನಿಯನ್ ಆಕ್ಟ್ ಮತ್ತು ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ಆಕ್ಟ್‌ಗಳಿಗೆ ತಿದ್ದುಪಡಿ ಮಾಡಿ, ದೇಶದ ಕಾರ್ಮಿಕ ವರ್ಗ ಹೋರಾಟ, ತ್ಯಾಗ, ಬಲಿದಾನಗಳಿಂದ ಗಳಿಸಿರುವ ಸಂಘಟಿತ್ಸುವ ಹಕ್ಕು, ಸಾಮೂಹಿಕ ಚೌಕಾಶಿಯ ಹಕ್ಕು, ಮುಷ್ಕರದ ಹಕ್ಕು, ಮೊದಲಾದ ಹಕ್ಕುಗಳನ್ನು ಕಸಿದುಕೊಳ್ಳುವ ಕುತಂತ್ರವನ್ನು ಕೇಂದ್ರ ಸರಕಾರ ಕೈಗೊಳ್ಳುವ ತಯಾರಿಯಲ್ಲಿದೆ. ಸ್ಟ್ಯಾಂಡಿಂಗ್ ಲೇಬರ್ ಕಮಿಟಿಯ ಕಾರ್ಯಕಲಾಪಗಳಿಂದ, ಕೇಂದ್ರ ಕಾರ್ಮಿಕ ಮಂತ್ರಿ ಪಿ. ಎ. ಸಂಗ್ಮಾ ಅವರ ಭಾಷಣಗಳಿಂದ ಅದು ಸ್ಪಷ್ಟವಾಗಿದೆ.

1977 ರಲ್ಲಿ ಮೊರಾರ್ಜಿ ಸರಕಾರ. ಇದೇ ರೀತಿಯ ತಿದ್ದುಪಡಿ ತರಲು ಪ್ರಯತ್ನಿಸಿದಾಗ ಕಾರ್ಮಿಕರ ಐಕ್ಯ ಪ್ರತಿಭಟನೆಯಿಂದಾಗಿ ಅದನ್ನ ಕೈ ಬಿಡಬೇಕಾಗಿ ಬಂದಿತ್ತು. ಈಗ ರಾಜೀವ್ ಸರಕಾರ ಅಂಥದ್ದೇ ತಪ್ಪುದಾರಿಯನ್ನು ತುಳಿಯುತ್ತಿದೆ. ಕೇಂದ್ರ ಸರಕಾರದ ಈ ನಿಲುವನ್ನು ವಿರೋಧಿಸಬೇಕೆಂದು ಕರ್ನಾಟಕದ ಸಿ. ಐ. ಟಿ. ಯು ರಾಜ್ಯ ಸಮಿತಿ ಕರೆಕೊಟ್ಟಿತ್ತು. ಆ ಕರೆಯ ಮೇರೆಗೆ 31-10-86 ರಂದು ಬೆಂಗಳೂರಿನಲ್ಲಿ ಮೈಸೂರ್ ಬ್ಯಾಂಕ್ ಸರ್ಕಲಿನಿಂದ ನೂರಾರು ಕೆಲಸಗಾರರು ಕೇಂದ್ರ ಸರಕಾರದಿಂದ ಕಾರ್ಮಿಕ ವಿರೋಧಿ ನೀತಿಯ ವಿರುದ್ಧ ಘೋಷಣೆ ಕೂಗುತ್ತಾ ರಾಜಭವನದೆದುರು ಧರಣಿ ಸತ್ಯಾಗ್ರಹ ನಡೆಸಿದರು. ಸೂರ್ಯನಾರಾಯಣ ರಾವ್, ಎಸ್. ಕೆ. ಉಪಾಧ್ಯಾಯ,ರು, ಅನಂತರಾಂ ಮತ್ತು ನಾರಾಯಣ ರಾವ್ ಬಾನು ರವರು ರಾಜ್ಯಪಾಲರಿಗೆ ಪ್ರತಿಭಟನಾ ಮನವಿಯನ್ನ ಪಿಸಿದರು. ಅನಂತರ ಮತ ಪ್ರದರ್ಶಕರನ್ನುದ್ದೇಶಿಸಿ ಭಾಷಣ ಮಾಡಿದ ಸೂರ್ಯನಾರಾಯಣರಾವ್ ಅವರು ಸಂಘಟಿತ ಕಾರ್ಮಿಕ ವರ್ಗ, ರಾಜೀವ ಗಾಂಧಿ ಸರಕಾರಂದ ಕಾರ್ಮಿಕ ಹಕ್ಕುಗಳನ್ನು ಮೊಟಕುಗೊಳಿಸುವ ಯಾವುದೇ ಕ್ರಮವನ್ನು ಸಹಿಸಲಾರದೆಂದು ಎಚ್ಚರಿಕೆ ನೀಡಿದರು.

ಅಖಿಲ ಭಾರತ ವಾಣಿಜ್ಯೋದ್ದಿಮೆಗಳ ನೌಕರರ ಸಂಘ, ವೋಲ್ಟಾಸ್ ಕಾರ್ಮಿಕರು ಕೂಡ ಮೆರವಣಿಗೆಮಾಡಿ ಕೆ. ಎಸ್. ಸುಬ್ರಮಣಿಯರ ನೇತೃತ್ವದಲ್ಲಿ ರಾಜ್ಯಪಾಲರಿಗೆ ಮನವಿ ಅರ್ಪಿಸಿದರು.

ಮಂಗಳೂರು

ಮಂಗಳೂರಿನಲ್ಲಿ ನೂರಾರು ಕಾರ್ಮಿಕರು ಟೆಲಿಫೋನ್ ಎಕ್ಸ್‌ಚೇಂಜ್ ಮುಂದೆ ಮತ ಪ್ರದರ್ಶನ ನಡೆಸಿ ಪ್ರತಿಭಟನೆ ವ್ಯಕ್ತ ಮಾಡಿದರು. ಕೆ. ಆರ್. ಶ್ರೀಯಾನ್ ಮೂಸಬ್ಬ ಮೊದಲಾದವರು ಮುಖಂಡತ್ವ ವಹಿಸಿದ್ದರು ಉಡುಪಿ, ಕುಂದಾಪುರಗಳಲ್ಲಿಯೂ ಪ್ರತಿಭಟನೆಗಳು ನಡೆದ ವರದಿಗಳೂ ಬಂದಿವೆ.

ಹಾಸನ:

ಸಿ ಐ ಟಿ ಯು ಕರ್ನಾಟಕ ರಾಜ್ಯ ಸಮಿತಿ ಕರೆಯಂತೆ ತಾ. 31-10-86 ರಂದು ಹಾಸನ ನಗರದಲ್ಲಿ. ಹಾಸನ ಕಾಫೀ ಕ್ಯೂರಿಂಗ್ ವರ್ಕ್ಸ್ ಪ್ಲಾಂಟೆಸ್ ಕಾಫಿ ಕ್ಯೂರಿಂಗ್ ವರ್ಕ್ಸ್, ಭಾರತಿ ಕಾಫಿ ಕ್ಯೂರಿಂಗ್ ವರ್ಕ್ಸ್. ಮತ್ತು ಮುದ್ರಣಾಲಯ ಹಾಗೂ ಇತರೆ ಕಾರ್ಮಿಕರು ಸುಮಾರು 400 ಕ್ಕಿಂತಲೂ ಹೆಚ್ಚು ಜನರು ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಮುಖ್ಯ ಅಂಚೆ ಕಛೇರಿಯ ಮುಂದೆ ಮತ ಪ್ರದರ್ಶನ ನಡೆಸಲಾಯ್ತು ನಂತರ ಅಲ್ಲಿ ನಡೆದ ಸಭೆಯಲ್ಲಿ ವಿ. ಸುಕುಮಾರ್ ಮಾತನಾಡಿದರು.

ಕಡೂರು:

ಕಡೂರಿನಲ್ಲಿ ಸ್ಟ್ಯಾಂಡರ್ಡ್ ಟೈಲರಿ, ಸ್ಟ್ಯಾಂಡರ್ಡ್ ಟೈಲ್ ಕಂ, ರಾಜಕಮಲ್ ಟೈಲಕ ಫ್ಯಾಕ್ಟರಿ ಮತ್ತು ಚಲನ ಚಿತ್ರ ಮಂದಿರಗಳ ಸುಮಾರು 200ಕ್ಕಿಂತಲೂ ಹೆಚ್ಚು ಕಾರ್ಮಿಕರು ಕಾಂ. ಎ. ಕೆ. ವಿಶ್ವನಾಥ್, ಕಾಂ. ಜಿ. ಎಸ್. ರಾಘವೇಂದ್ರ ರವರ ಮುಖಂಡತ್ವದಲ್ಲಿ ಕಡೂರಿನ ಮುಖ್ಯ ಬೀದಿಗಳಲ್ಲಿ ಸಂಜೆ 6 ಗಂಟೆಗೆ ಮೆರವಣಿಗೆ ನಡೆಸಿ ದೂರವಾಣಿ ಕೇಂದ್ರ ಕಛೇರಿಯ ಮುಂದೆ ಮತ ಪ್ರದರ್ಶನ ನಡೆಸಿದರು.

ಕಳಸ:

ಕಳಸಾದಲ್ಲಿ ಸುಮಾರು 150 ವಿವಿಧ ತೋಟಗಳಿಂದ ಬಂದ ಕಾರ್ಮಿಕರು ಮತ್ತು ಕಾರ್ಮಿಕ ಹಿತೈಷಿಗಳು ಕಾಂ. ಕೆ. ಸುಕುಮಾರ್ ಮತ್ತು ಕಾಂ. ಅಂಣಿಯವರ ಮುಖಂಡತ್ವದಲ್ಲಿ ಬೀದಿಗಳಲ್ಲಿ ಮೆರವಣಿಗೆ ನಡೆಸಿ ದೂರವಾಣಿ ಕಛೇರಿಯ ಮುಂದೆ ಮತ ಪ್ರದರ್ಶನ ನಡೆಸಿದ್ದಾರೆ.

ಚಿಕ್ಕಮಗಳೂರು:

ಚಿಕ್ಕಮಗಳೂರು ಮುಖ್ಯ ಅಂಚೆ ಕಛೇರಿಯ ಮುಂದೆ ವಿವಿಧ ತೋಟಗಳಿಂದ ಬಂದ ಮತ್ತು ಮಲೆನಾಡು ಪ್ಲಾಂಟರ್ಸ್ ಕಾಫಿ ಕ್ಯೂರಿಂಗ್ ವರ್ಕ್ಸ್‌ಗಳ ಕಾರ್ಮಿಕರು ಮತಪ್ರದರ್ಶನ ನಡೆಸಿ ಧರಣಿ ನಡೆಸಿದ್ದಾರೆ ಮೂಡಿಗೆರೆಯ ದೂರವಾಣಿ ಕಛೇರಿಯ ಮುಂದೆ ವಿವಿಧ ತೋಟಗಳಿಂದ ಬಂದ ಕಾರ್ಮಿಕರು ಕಾಂ. ಎ. ಸಿ. ಕೇಶವರವರ ಮುಖಂಡತ್ವದಲ್ಲಿ ಮತ ಪ್ರದರ್ಶನ ನಡೆಸಿದ್ದಾರೆ.

ಕಾಂಗ್ರೆಸ್ಸಿನ ಸಂಘಟನಾ ಶಕ್ತಿಯಲ್ಲಿ ಕುಸಿತ

(1ನೇ ಪುಟದಿಂದ)

ಮುಖಂಡತ್ವಕ್ಕೆ ಇಲ್ಲದಂತಾಗಿದೆ. ಆರ್ಥಿಕ ಬಿಕ್ಕಟ್ಟು ತೀವ್ರಗೊಳ್ಳುತ್ತಿರುವಾಗ, ಕಾಯ್ದೆ-ಕಾನೂನು ದುರ್ಬಲಗೊಂಡಾಗ ಛಿದ್ರಕಾರಿ ಶಕ್ತಿಗಳಿಂದ ದೇಶದ ಸಮಗ್ರತೆಗೆ ಅಪಾಯ ಹೆಚ್ಚಾಗುತ್ತಿರುವಾಗ, ಈ ರೀತಿಯ ಅಂತರಿಕ ಬಿಕ್ಕಟ್ಟನ್ನು ಸಾಮ್ರಾಜ್ಯಶಾಹಿಗಳು ದೇಶವನ್ನು ಅಭದ್ರಗೊಳಿಸುವ ಸಲುವಾಗಿ ಉಪಯೋಗಿಸುತ್ತಿರುವಾಗ ಕಾಂಗ್ರೆಸ್ ಮುಖಂಡತ್ವ ಅವುಗಳನ್ನೆದುರಿಸಲು ಕ್ರಮ ಕೈಗೊಳ್ಳದೆ ನಿರುಪಾಯ ಸ್ಥಿತಿಯಲ್ಲಿರುವುದು ಮುಖಂಡತ್ವದ ಗೊಂದಲವನ್ನು ತೋರ್ಪಡಿಸುತ್ತದೆ ಎಂದು ಅಕ್ಟೋಬರ್ 31 ರಿಂದ ನವೆಂಬರ್ 2 ರವರೆಗೆ ದಿಲ್ಲಿಯಲ್ಲಿ ಸೇರಿದ್ದ ಸಿ ಪಿ. ಐ (ಎಂ) ಪಕ್ಷದ ಕೇಂದ್ರ ಸಮಿತಿ ಅಭಿಪ್ರಾಯ ವ್ಯಕ್ತ ಮಾಡಿದೆ.

ದೇಶದಲ್ಲಿ ಮತೀಯ ಪರಿಸ್ಥಿತಿ ಹದಗೆಡುತ್ತಿದೆಂದೂ, ಜಾತ್ಯಾತೀತ ಶಕ್ತಿಗಳ ಮೇಲೆ ಕೈಮಾಡುವ ಧೈರ್ಯವನ್ನು ಮುಸ್ಲಿಂ ಮೂಲಭೂತವಾದಿಗಳು ಪಡೆದಿದ್ದಾರೆಂದೂ, ಅದೂ ಕೂಡ ಹಿಂದೂ ಜಾತಿವಾದಿಗಳು ಮುಸಲ್ಮಾನರ ವಿರುದ್ಧ ಮತೀಯ ಗಲಭೆಗಳನ್ನೆಬ್ಬಿಸುತ್ತಿರುವಾಗ ಇಂಥ ಘಟನೆಗಳು ನಡೆಯುತ್ತಿವೆ. ಈ ರೀತಿ ಎರಡೂ ಮತೀಯವಾದಿಗಳು ದೇಶದಲ್ಲಿ ಹಲವಾರು ಕಡೆ ಸಂಘಟಿತ ದಂಗೆ ಎಬ್ಬಿಸಿವೆ.

ಅಸ್ಸಾಂ-ಪಂಜಾಬ್‌ಗಳಲ್ಲಿ ಸಮಸ್ಯೆಗಳ ಪರಿಹಾರಕ್ಕೆ ಒಪ್ಪಂದಗಳಾದರೂ ಕೂಡ ರಾಜೀವ ಗಾಂಧಿ ಆ ಒಪ್ಪಂದಗಳನ್ನು ಜಾರಿ ಮಾಡುವುದನ್ನು ದೂರ ತಳ್ಳುತ್ತಿರುವುದು ಹಿಂಸಾತ್ಮಕ ಕೃತ್ಯಗಳಿಗೆ ಒಳ್ಳೇ ಅವಕಾಶ ಮಾಡಿಕೊಟ್ಟಿದೆ, ಕೊಲೆ, ಸುಲಿಗೆ, ದರೋಡೆಗಳು ದಿನನಿತ್ಯ ನಡೆಯುತ್ತಿವೆ. ನಿರಪರಾಧಿಗಳು ಛಿದ್ರಕಾರಿ ಶಕ್ತಿಗಳಿಗೆ ಬಲಿಯಾಗುತ್ತಿದ್ದಾರೆ. ಕೇಂದ್ರ ಸರಕಾರದ ನಿರುಪಯುಕ್ತ ಧೋರಣೆಯಿಂದ ಸ್ಫೂರ್ತಿಗೊಂಡ ಭಯೋತ್ಪಾದಕರು ಜ॥. ವೈದ್ಯರನ್ನು ಕೊಲೆ ಮಾಡಿದರು. ಪಂಜಾಬ್‌ನ ಪೋಲೀಸ್ ಮುಖ್ಯಾಧಿಕಾರಿ, ರಾಜೀವಗಾಂಧಿ ಮೊದಲಾದವರ ಕೊಲೆಗೆ ಪ್ರಯತ್ನ ನಡೆಸಿದರು. ಇದೆಲ್ಲ ಆಡಳಿತೆಯ ಕುಸಿತವನ್ನು ರಾಷ್ಟ್ರೀಯ ಐಕ್ಯತೆಗೆ ಗಂಭೀರ ಅಪಾಯವನ್ನೂ ತೋರ್ಪಡಿಸುತ್ತದೆಂದು ಸಿ ಸಿ ಅಭಿಪ್ರಾಯ ವ್ಯಕ್ತ ಮಾಡಿದೆ.

ಬಂಡವಾಳ ಶಾಹಿ ವಿರೋಧ ಪಕ್ಷಗಳ ಕುರಿತು ವಿಶ್ಲೇಷಣೆ ಮಾಡುತ್ತ. ಕಾಂಗ್ರೆಸ್ ಪಕ್ಷದ ನೀತಿಯ ಬದಲಾಗಿ ಬೇರೆ ಧೋರಣೆ ಮತ್ತು ಕಾರ್ಯಕ್ರಮದಲ್ಲಿ ಜನರ ವಿಶ್ವಾಸ ಹುಟ್ಟಿಸುವಲ್ಲಿ ಆ ಪಕ್ಷಗಳು ವಿಫಲಗೊಂಡಿವೆಂದು ಸಿ. ಸಿ. ಅಭಿಪ್ರಾಯ ಪಟ್ಟಿದೆ. ಅಷ್ಟೇ ಅಲ್ಲದೆ, ಅಧಿಕಾರದ ಸಲುವಾಗಿ ಗುಂಪುಗಳೂ, ವ್ಯಕ್ತಿಗಳೂ, ಕಚ್ಚಾಡುತ್ತಿರುವುದರಿಂದ ಒಳ್ಳೆಯ ಆಡಳಿತೆಯನ್ನು ಒದಗಿಸಿ ಕಾಂಗ್ರೆಸ್ಸಿಗಿಂತ ತಾವು ಉತ್ತಮರೆಂದು ತೋರಿಸುವುದರಲ್ಲಿ ತಾವು ಆಳುತ್ತಿರುವ ಕರ್ನಾಟಕ—ಆಂಧ್ರಗಳಲ್ಲಿ ಅವು ವಿಫಲಗೊಂಡಿವೆ. ಆದ್ದರಿಂದ ಅವು ಓಟಿನ ಬ್ಯಾಂಕ್‌ಗಳನ್ನು ಸೃಷ್ಟಿಸಲು ಜಾತಿ-ಧರ್ಮಗಳ ಆಧಾರದಲ್ಲಿ ಜನರನ್ನು ವಿಭಜಿಸುವ ತಂತ್ರ ಹೂಡಿದ್ದಾರೆ. ಆ ಕಾರಣಕ್ಕಾಗಿಯೇ ಕರ್ನಾಟಕದ ಜನತಾ ಸರಕಾರ ಮತ್ತು ಆಂಧ್ರದ ತೆಲುಗು ದೇಶಂ ಸರಕಾರ ವಿಾಸಲಾತಿ ಪ್ರಶ್ನೆಯೆನ್ನುತ್ತಿವೆ. ಎರಡೂ ರಾಜ್ಯಗಳ ಮುಖ್ಯ ಮಂತ್ರಿಗಳ ನಿಲುವು ಆಯಾ ರಾಜ್ಯದಲ್ಲಿ ಗೊಂದಲ ಉಂಟು ಮಾಡಿದ ನಂತರ ಅವರಿಬ್ಬರೂ ಹಿಂಜರಿಯಬೇಕಾಯಿತು. ತಮ್ಮ ರಾಜಕೀಯ ಸಂದರ್ಭವಾದಿತನದಿಂದಾಗಿ ಬಂಡವಾಳ ಶಾಹಿ ವಿರೋಧ ಪಕ್ಷಗಳು ಯಾವ ರೀತಿ ರಾಷ್ಟ್ರೀಯ ಐಕ್ಯತೆಗೆ ಗಂಡಾಂತರವನ್ನೊಡ್ಡುತ್ತಾರೆಂಬುದನ್ನು ಈ ಘಟನೆಗಳು ಸ್ಪಷ್ಟವಾಗಿ ತೋರ್ಪಡಿಸುತ್ತಿವೆ. ಸರಕಾರದ ನಿಲುವಿಯ ಪರವಾಗಿ ಮತ್ತು ವಿರೋಧವಾಗಿ ಸಂಕುಚಿತವಾದಿಗಳು ಹಾಗೂ ಪ್ರತ್ಯೇಕವಾದಿಗಳ ನಿಲುವಿಯನ್ನು ಎದುರಿಸಲು ಎರಡೂ ರಾಜ್ಯಗಳ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಗಳು ಸರಿಯಾದ ಸಮತೋಲದ ನಿಲುವಿಯನ್ನು ತಾಳಿವೆ. ಎಂದು ಸಿ. ಸಿ. ಅಭಿಪ್ರಾಯ ವ್ಯಕ್ತ ಮಾಡಿದೆ.

Printed & Published by P. Ramachandra Rao on behalf of the Communist Party of India [Marxist] Karnataka State Committe, K. V. Temple Street, Sultanpet, Bangalore-560053 Editorial and manageriel office: L-56, K. V. Temple Street, Sultanpet B-53 Phone : 75331 Editor P. Ramachandra Rao Managing Editor : N. K. Upadhyaya